


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 259 | Thursday 26-06-2025 | E-mail : maruti.b.hosamani76@gmail.com | Page: 4 | Price : Rs. 1/-


## ನಾಯಕರಾಗಲು ಬಯಸುವವರು ಉತ್ತಮ ನಾಯಕತ್ವ ಗುಣ ಇರುವವರೊಂದಿಗೆ ಬೆಳೆಯಬೇಕು: ಬಿ.ಎಸ್ ನೇಮಗೌಡರ್





**ಸಿಹಿ ಕಹಿ ಸುದ್ದಿ,**

**ಗದಗ :** ನಗರದ ಆದರ್ಶ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಎನ್.ಎಸ್.ಎಸ್ ಕೋಶನ್ ಹಾಗೂ ನಗರದ ಆದರ್ಶ ಶಿಕ್ಷಣ ಸಂಸ್ಥೆಗೆ ಪದವಿ ವಾಣಿಜ್ಯ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ವಿಶ್ವವಿದ್ಯಾಲಯ ಮಟ್ಟದ ನಾಯಕತ್ವ ತರಬೇತಿ ಶಿಬಿರದ ಐದನೇ ದಿನದ ವಿಶೇಷ ಅತಿಥಿಗಳಾಗಿ ಆಗಮಿಸಿದ ಗದಗ ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳಾದ ಮಾನ್ಯ ಶ್ರೀ ಬಿ.ಎಸ್ ನೇಮಗೌಡರವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸ್ವ-ಯಂ ಸೇವಕ ಸೇವಕಿಯರನ್ನು ಉದ್ದೇಶಿಸಿ ಮಾತನಾಡಿ, ಈ ಜಗತ್ತಿನಲ್ಲಿ ಅನೇಕರು ನಾಯಕರಾಗಲು ಬಯಸುತ್ತಾರೆ. ಹೀಗಿದ್ದಾಗ ನಾಯಕರಾಗುವವರು ಮೊದಲು ನಾಯಕತ್ವ ಗುಣ ಇರುವ ವ್ಯಕ್ತಿಗಳೊಂದಿಗೆ ಬೆರೆಯಬೇಕು ನಾಯಕತ್ವ ಗುಣ ಇದು ಒಂದೇ ದಿನಕ್ಕೆ ಬರುವುದಲ್ಲ ಅದು ಪರಿಶ್ರಮದ ಮೂಲಕ ಬರುವ ಒಂದು ಚಟುವಟಿಕೆಯಾಗಿದ್ದು ಒಂದು ನಾಯಕತ್ವ ಗುಣಕ್ಕೆ ಸರಿಯಾದ ವ್ಯಕ್ತಿಗಳಿಂದ ಮಾರ್ಗದರ್ಶನ ಬೇಕು ಅದರೊಂದಿಗೆ ಸುತ್ತ ಮುತ್ತಲಿನ ಪರಿಸರವೂ ಕೂಡ ಸಮಾನವಾಗಿರಬೇಕು. ಅಂದರೆ ಮಾತ್ರ ನಾಯಕತ್ವ ಗುಣಗಳನ್ನು ನಮ್ಮಲ್ಲಿ ಅಳವಡಿಸಿ ಕೊಳ್ಳಬಹುದು.

ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಹೀಗೆ ಅನೇಕ ನಾಯಕರುಗಳು ನಮಗೆ ರೋಲ್ ಮಾಡೆಲ್ ಗಳು ಅವರು ತಮ್ಮ ತ್ಯಾಗ ಬಲಿದಾನಗಳ ಮೂಲಕ ಈ ಜಗತ್ತಿಗೆ ನಾಯಕರಾಗಿ ಹೊರ ಹೊಮ್ಮಿದ್ದಾರೆ ಕಾರಣ ದೈಹಿಕ ಮಾನಸಿಕ ಸಾಮಾಜಿಕವಾಗಿ ಸದೃಢರಾಗಿರ ಬೇಕು ಹಾಗೆ ಸಮಾಜದ ಜನರೊಂದಿಗೆ ಸಮಾನವಾಗಿ ಬೆರೆತರೆ ಮಾತ್ರ ನಾಯಕರಾಗಲು ಸಾಧ್ಯ ನಾಯಕನಾದವನು ಯಾರೇ ಏನೇ ಕೇಳಿದರು ಉತ್ತರಿಸುವ ಗುಣ ಆ ವ್ಯಕ್ತಿಯಲ್ಲಿ ಬೆಳೆಸಿ ಕೊಳ್ಳಬೇಕು. ನಮ್ಮ ಜೀವನದಲ್ಲಿ ಬರುವ ಸಮಸ್ಯೆಗಳಿಗೆ ಸ್ಪಂದಿಸಿ ಒಳಿತನ್ನು ಬಯಸುವವನೇ ಉತ್ತಮ ನಾಯಕ ಜೀವನದಲ್ಲಿ ಬರುವ ಅನೇಕ ಸವಾಲುಗಳನ್ನು ಸರಿ ತಪ್ಪುಗಳನ್ನು ಗಮನಿಸಿ ನಿರ್ಧಾರ ತೆಗೆದು ಕೊಳ್ಳುವವನೇ ನಾಯಕ. ಹೀಗಾಗಿ ನಮ್ಮ ವಿದ್ಯಾರ್ಥಿ ಜೀವನದಿಂದಲೇ ಶಿಸ್ತು ಸೇವಾ ಮನೋಭಾವ ರೂಢಿಸಿ ಕೊಂಡರೆ ಮಾತ್ರ ನಾಯಕರಾಗಿಹೊರಹೊಮ್ಮಬಹುದುಈಒಂದು ಶಿಬಿರದಲ್ಲಿ ಅನೇಕ ಯುವಕರಿರುವುದರಿಂದ ಡ್ರಗ್ಸ್ ಬಗ್ಗೆ ಸ್ವಲ್ಪ ಜಾಗೃತಿ ಇರಲಿ, ಅದರೊಂದಿಗೆ ಹೆಲ್ಮೆಟ್ ಕಡ್ಡಾಯವಾಗಿ ಧರಿಸಿ ಹೀಗೆ ಅನೇಕ ವಿಚಾರಗಳನ್ನು ತಮ್ಮ ಉದ್ಘಾಟನೆ ನುಡಿಗಳಲ್ಲಿ ಹಂಚಿ ಕೊಂಡರು ವೇದಿಕೆ ಮೇಲೆ ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ, ಬಿ.ಪಿ ಜೈನರ ಪ್ರೊ, ಪ್ರವೀಣ್ ಚಪ್ಪರಮನಿ, ಪ್ರೊ, ಶಿವಾನಂದ್ ಕೊರವರ್, ಡಾ, ಎಸ್ ಆರ್ ನದಾಫ್, ಡಾ, ಹಿರೇಮಠ್, ಪ್ರೊ. ಮಂಜುಳಾ ಹೊಂಬಾಳಿ, ಡಾ, ದಳವಾಯಿ ಸ್ವಯಂ ಸೇವಕ ಸೇವಕರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ.ಗದಗ**

## ಪೌರ ಕಾರ್ಮಿಕರಿಗೆ ಮತ್ತು ಆಸ್ಪತ್ರೆಯ ಸಫಾಯಿ ಕರ್ಮಚಾರಿಗಳಿಗೆ ಪ್ರತಿ ತಿಂಗಳು 5 ನೇ. ತಾರೀಖಿನೊಳಗೆ ವೇತನ ಪಾವತಿಸಿ – ಜಿಲ್ಲಾಧಿಕಾರಿ ಮೀನಾ ನಾಗರಾಜ್



**ಸಿಹಿ ಕಹಿ ಸುದ್ದಿ,**

**ಚಿಕ್ಕಮಂಗಳೂರು :** ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆಯಾದ ನಂತರ ಔಷದ ಉಪಚಾರಗಳನ್ನುಕೊಡಿಸಿಕೊಡಬೇಕುಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ರವರು ಹೇಳಿದರು. ಅವರು ಇಂದು ನಡೆದ ಜಿಲ್ಲಾ ಸಫಾಯಿ ಕರ್ಮಚಾರಿ ಮತ್ತು ಮ್ಯಾನುಯೆಲ್ ಸ್ಕೆವೆಂಜರ್ಸ್ ಪುನರ್ವಸತಿ ಸಮಿತಿ ಸಭೆಯಲ್ಲಿ ಮಾತನಾಡಿದರು. ಸಮಿತಿ ಸದಸ್ಯರಾದ ತರೀಕೆರೆ ಎನ್.ವೆಂಕಟೇಶ್ ಮಾತನಾಡಿ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರು ನೇರ ಪಾವತಿ ಪೌರ ಕಾರ್ಮಿಕರು ಮತ್ತು ಆಸ್ಪತ್ರೆ ಸಫಾಯಿ ಕರ್ಮಚಾರಿಗಳಿಗೆ ಪ್ರತಿ ತಿಂಗಳು 15 ರಿಂದ 20 ನೇ. ತಾರೀ-ಕಿಗೆ ಸಂಬಳ ಕೊಡುತ್ತಿದ್ದು ಇದರಿಂದ ಅವರ ಜೀವನಕ್ಕೆ ತುಂಬಾ ತೊಂದರೆಯಾಗಿದೆ ಪ್ರತಿ ತಿಂಗಳು ಐದನೇ ತಾರೀಕಿನೊಳಗೆ ವೇತನ ಪಾವತಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಐದನೇ ತಾರೀಖಿನೊಳಗೆ ಗುತ್ತಿಗೆ ಪೌರ ಕಾರ್ಮಿಕರು ಮತ್ತು ಆಸ್ಪತ್ರೆ ಸ್ವಚ್ಛತಾ ಕೆಲಸಗಾರರಿಗೆ ವೇತನ ಪಾವತಿಸಬೇಕು ಎಂದು ಮಾರ್ಗದರ್ಶನ ನೀಡಿದರು. ಪ್ರತಿ ವರ್ಷ ಪೌರ ಕಾರ್ಮಿಕರಿಗೆ ಟೈಮ್ ಬಾಂಡ್ ವೇತನವನ್ನು ಮಂಜೂರಿ ಮಾಡಿ ಕೊಳ್ಳಬೇಕು. ಎಂದು ತಿಳಿಸಿದರು. ಹಾಗೂ ಪೌರ ಕಾರ್ಮಿಕರಿಗೆ ಪ್ರತಿದಿನ ಬೆಳಗ್ಗೆ 5:30 ರಿಂದ 6 ಗಂಟೆಯ ವರೆಗೆ ಹಾಜರಿಗೆ ಬಯೋಮೆಟ್ರಿಕ್ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಂಕಷ್ಟ ಬತ್ತೆ ಎಂದು ಪ್ರತಿ ತಿಂಗಳು ಕೊಡಬೇಕು ಅದು ಸಂಬಳದ ಜೊತೆ ಕೊಡಬೇಕು ಎಂದು ತಿಳಿಸಿದರು. ಪೌರ ಕಾರ್ಮಿಕರ ದಿನಾಚರಣೆ ಯೆಂದು ಪೌರ ಕಾರ್ಮಿಕರಿಗೆ 7,000 ರೂಪಾಯಿ ವೇತನ ಪಾವತಿಸಬೇಕು ಎಂದು ಹೇಳಿದರು. ನಗರ ಸಭೆಯ ಪೌರ ಕಾರ್ಮಿಕರ ಬೆಳಗಿನ ಉಪಹಾರ ಇದ್ದಲ್ಲಿ ಉತ್ತಮ ರೀತಿಯ ಆಹಾರದ ಜೊತೆಗೆ ಮೊಟ್ಟೆ ವಿತರಣೆ ಮಾಡಬೇಕು ಎಂದು ತಿಳಿಸಿದರು. ಮೆಡಿಕಲ್ ಕಾಲೇಜಿನಲ್ಲಿ ಸ್ವಚ್ಛತಾ ಕೆಲಸ ಮಾಡಲು ಹೆಚ್ಚುವರಿ ನಾಲಕ್ಕು ಜನ ಕಾರ್ಮಿಕರನ್ನು ಹೊರ ಗುತ್ತಿಗೆಯಲ್ಲಿ ನೇಮಕ ಮಾಡಿ ಕೊಳ್ಳಲು ಸೂಚನೆ ನೀಡಿದರು. ಜಿಲ್ಲೆಯಲ್ಲಿರುವ ಎಲ್ಲಾ ಪೌರ ಕಾರ್ಮಿಕರ ಬಡಾವಣೆಗಳಲ್ಲಿ ಶುದ್ಧಗಂಗಾ ನೀರಿನ ಘಟಕ ಸ್ಥಾಪಿಸಲು ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರ ಸಭೆ ಮುಖ್ಯ ಅಧಿಕಾರಿಗಳಿಗೆ ತಿಳಿಸಿದರು. ಜಾಗೃತಿ ಸಮಿತಿ ಜಿಲ್ಲಾ ಸದಸ್ಯರಾದ ಎಂ ವಿ ಭವಾನಿ ರವರು ಮಾತನಾಡಿ ಅಜ್ಜಂಪುರದ ಪೌರ ಕಾರ್ಮಿಕ ಮಹೇಶ್ವರವರ ಕಾಲು ಗ್ಯಾಂಗ್ರಿನ್ ಆಗಿದ್ದು ಮತ್ತು ನಗರ ಸಭೆ ಪೌರ ಕಾರ್ಮಿಕ ಪೆಂಚಲಮ್ಮ ರವರಿಗೆ ಕ್ಯಾನ್ಸರ್ ಕಾಯಿಲೆ ಆಗಿರುವುದರಿಂದ ಅವರಿಗೆ ಚಿಕಿತ್ಸೆ ವೆಚ್ಚವನ್ನು ಇಲಾಖೆಯವರು ಬರಿಸಬೇಕು ಎಂದು ತಿಳಿಸಿದರು. ಆಸ್ಪತ್ರೆ ಸ್ವಚ್ಛತಾ ಕರ್ಮಚಾರಿಗಳಿಗೆ ಸಫಾಯಿ ಕರ್ಮಚಾರಿ ಗುರುತಿನ ಚೀಟಿಯನ್ನು ಕೊಡಬೇಕೆಂದು ತಿಳಿಸಿದರ ಮೇರೆಗೆ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲಾ ಮುಖ್ಯ ಅಧಿಕಾರಿಗಳಿಗೆ ಸಫಾಯಿ ಕರ್ಮಚಾರಿ ಗುರುತಿನ ಚೀಟಿ ಕೊಡಲು ತಿಳಿಸಿದರು. ಸಭೆಯಲ್ಲಿ ಜಾಗೃತಿ ಸಮಿತಿ ಸದಸ್ಯರಾದ ಕೆ.ಟಿ ರಾಧಾಕೃಷ್ಣ ಹಾಗೂ ಜಿಲ್ಲೆಯ ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರ ಸಭೆಯ ಮುಖ್ಯ ಅಧಿಕಾರಿಗಳು ಆಯುಕ್ತರು ಎಲ್ಲ ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರು. ಆರೋಗ್ಯಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಉಪ ನಿರ್ದೇಶಕರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್.ತರೀಕೆರೆ. ಚಿಕ್ಕಮಂಗಳೂರು**

## ಎಮ್.ಬಿ.ಬಿ.ಎಸ್ ನೀಟ್ ಪರೀಕ್ಷೆಯಲ್ಲಿ ರ್ಯಾಂಕ್ ಸಾಧಿಸಿದ ಕುಮಾರಿ ಸಂಜನಾಳನ – ನಾಗರಾಜ್ ಅವರ ಕುಟುಂಬದಿಂದ ಹೃದಯ ಪೂರ್ವಕವಾಗಿ ಸ್ವಾಗತಿಸಿ ಅಭಿನಂದಿಸಿದರು



**ಸಿಹಿ ಕಹಿ ಸುದ್ದಿ,**

**ಕುಷ್ಟಗಿ :** ಪಟ್ಟಣದ ಗಾಂಧೀ ನಗರದ ನಿವಾಸಿಗಳಾದ ಮಾದಿಗ ಸಮುದಾಯದ ಚಂದ್ರಶೇಖರ ಶರಣಪ್ಪ ಶಾಖಾಪೂರ ಇವರ ಸುಪುತ್ರಿ ಕುಮಾರಿ ಸಂಜನಾ ತಂದಿ.ಚಂದ್ರಶೇಖರ ರವರು ಒಃಃಖ ನೀಟ್ ಪರೀಕ್ಷೆಯಲ್ಲಿ 3800 ರ್ಯಾಂಕ್ ನಲ್ಲಿ ಉತ್ತೀರ್ಣರಾಗಿ ಸಾಧನೆ ಮಾಡಿದ್ದಾರೆ. ಕುಮಾರಿ ಸಂಜನಾಳಿಗೆ ಕುಷ್ಟಗಿ ತಾಲೂಕಿನ ಮಾದಿಗ ಸಮುದಾಯದ ಅಧ್ಯಕ್ಷರು ಮುಖಂಡರು ಶ್ರೀ ನಾಗರಾಜ.ಮೇಲಿನಮನಿ, ಮತ್ತು ಮುಂತಾದ ಹಿರಿಯರು ಮುಖಂಡರು, ವಿದ್ಯಾರ್ಥಿಗಳು, ಶಿಕ್ಷಕರು ಸೇರಿದಂತೆ ಅನೇಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ.

## ಕಲಾವಿದರ ಸಮಸ್ಯೆಗಳಿಗೆ ಪರಿಹಾರ ನೀಡಲು ಸೂಚಿಸಿದ ಮಾಜಿ ಶಾಸಕ ನಂಜಯ್ಯನಮಠ

**ಬಾಗಲಕೋಟೆ :** ಜಿಲ್ಲೆಯ ಎಲ್ಲಾ ಕಲಾವಿದರ ಪ್ರಾಥಮಿಕ ಕುಂದು ಕೊರತೆಗಳನ್ನು ತೀವ್ರಗತಿಯಲ್ಲಿ ಸರಿಪಡಿಸಬೇಕೆಂದು ಜಿಲ್ಲೆಯ ಕನ್ನಡಮತ್ತುಸಂಸ್ಕೃತಿಇಲಾಖೆಯ ಸಹಾಯಕ ನಿರ್ದೇಶಕರಿಗೆ ಮಾಜಿ ಶಾಸಕ, ಜಿಲ್ಲೆಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಸ್. ಜಿ. ನಂಜಯ್ಯನಮಠ ಸೂಚಿಸಿದರು.



ಕರ್ನಾಟಕ ರಾಜ್ಯ ಸರ್ವ ಕಲಾವಿದರ ಒಕ್ಕೂಟದ ನಿಯೋಗವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭವನದ ಎದುರು ಜಮಾಯಿಸಿಕೊಂಡು ಹಲವು ಪ್ರಾಥಮಿಕ ಸಮಸ್ಯೆಗಳ ಪಟ್ಟಿ ಮುಂದೆ ಹಿಡಿದರು. ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ಶರಣಬಸವ ಶಾಸ್ತ್ರಿಗಳು ಮತ್ತು ಪ್ರಧಾನ ಕಾರ್ಯದರ್ಶಿ ಪವಿತ್ರ ಜಕ್ಕಪ್ಪನವರ ಮಾತನಾಡಿ ಮಾಜಿ ಶಾಸಕ ಎಸ್. ಜಿ. ನಂಜಯ್ಯನಮಠ ಹಾಗೂ ಸಹಾಯಕ ನಿರ್ದೇಶಕ ಕರಣ ಕುಮಾರ ಜೈನಾಪುರ ಅವರ ಗಮನಕ್ಕೆ ತರಲು ಪ್ರಯತ್ನಿಸಿದರು.

ಹಲವು ವರ್ಷಗಳಿಂದ ಇಲ್ಲಿಯವರೆಗೆ ನಡೆದ ಹಲವು ನ್ಯೂನ್ಯತೆಗಳನ್ನು ಸಾದರಪಡಿಸಿ ಸೇವೆ ಸಲ್ಲಿಸಿದ ಕಲಾವಿದರ ಸಮಸ್ಯೆಗಳನ್ನು ಪರಿಶೀಲಿಸಿ ಕಲಾವಿದರಿಗೆ ತೀವ್ರ ಗತಿಯಲ್ಲಿ ನ್ಯಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.

ಮುಂದುವರೆದು ಮಾತನಾಡಿದ ನಂಜಯ್ಯನಮಠ ಅವರು ಮಾಶಾಸನ ಮಂಜೂರಾತಿಯಲ್ಲಿ ವಿಳಂಬವಾಗಿರುವ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಅರ್ಹ ಕಲಾವಿದರಿಗೆ ಶೀಘ್ರ ಮಾಶಾಸನ ಒದಗಿಸಿಕೊಡಲು ಜಾನಪದ ಅಕಾಡೆಮಿಗೆ ಶಿಫಾರಸ್ಸು ಪತ್ರ ನೀಡಲು ನಿರ್ದೇಶಕರಿಗೆ ಸೂಚಿಸಿದ ಅವರು, ಮಾಶಾಸನ ಫಾರ್ಮಗಳು ಬಂದ ತಕ್ಷಣ ಕಲಾವಿದರಿಗೆ ಮಾಹಿತಿ ನೀಡಿ ಮಾಶಾಸನಫಾರ್ಮಗಳನ್ನುಭರ್ತಿ ಮಾಡಿ ಒದಗಿಸಲು ಹೇಳಿದರು.

ಮುಖಂಡರಾದ ಯಲ್ಲಪ್ಪ ಪೂಜಾರ್, ಶಂಕರಪ್ಪ ತಂಬಾಕದ, ರಾಮಪ್ಪ ಗಲಗಲಿ, ನಾರಾಯಣ ಪತ್ತಾರ, ಹೊಳಬಸಪ್ಪ ಬಾದಾಮಿ, ಮಲ್ಲಮ್ಮ ಶಿರೋಳ, ಬಸಮ್ಮ ಭಗವತಿ,ಪರಯ್ಯಮಠಪತಿ,ಲಕ್ಕವ್ವ ಕಪರಟ್ಟಿ,ಶಿವಲಿಂಗವ್ವಗಸ್ತಿ, ವಿಠ್ಠಲ ತಳವಾರ ಸೇರಿದಂತೆ ನೂರಾರು ಕಲಾವಿದರು ಪಾಲ್ಗೊಂಡಿದ್ದರು.

## "ಎತ್ತುಗಳು ಕೃಷಿಯ ಆಸರೆಯ ರೈತಾಪಿಗಳ ಬೆನ್ನೆಲುಬು"



ರೈತರ ಸಿರಿ ಖುಷಿ ಹಬ್ಬ
ಜೋಡೆತ್ತುಗಳು ಪೂಜೆ
ಎತ್ತುಗಳ ಗೌರವದಿ
ಪೂಜೆ ಗೈದು ನಮಿಸುವ
ಭೂಮಾತೆ ಮಣ್ಣು
ಜಗದಲಿ ಬಸವ ಪೂಜ್ಯತೆ
ಬಿಸಿಲು ಬೇಗೆ ಕಳೆದು
ಮಳೆಯು ಇಳೆಗೆ ತಂಪು
ಹರುಷದಿ ಎತ್ತುಗಳ
ಪೂಜಿಸುವ ಹಬ್ಬವು
ಎತ್ತುಗಳು ಕೃಷಿಯ ಆಸರೆಯು
ರೈತಾಪಿಗಳ ಮಿತ್ರರು
ಗೌರವದ ಪೂಜಿತವು
ಸಿಹಿ ಕಡಬು ತಿನಸಿ
ಹರುಷದಿ ಕುಣಿತವು
ಮಣ್ಣೆತ್ತಿನ ಹಬ್ಬವು
ಸರ್ವರ ಸಂಭ್ರಮವು
ನಾಡ ದೇಶದ ಪ್ರಗತಿಗೆ
ದೇಶದ ಬೆನ್ನಲಬು ರೈತರು
ರೈತರ ಬೆನ್ನೆಲಬು ಎತ್ತುಗಳು
ವರುಷ ವರುಷವು
ಹರುಷದ ಹೊನಲು
ಮಣ್ಣೆತ್ತಿನ ಪೂಜೆಯು
ವಿಶ್ವದಲಿ ಆಚಂದ್ರಾರ್ಕವು

– ಶ್ರೀದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ದೇವರ ಹಿಪ್ಪರಗಿ.

## ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯೋಗ ಮೇಳ: 486 ವಿದ್ಯಾರ್ಥಿಗಳು ಭಾಗಿ

## ವಿದ್ಯಾರ್ಥಿಗಳ ಬದುಕಿನ ಭದ್ರತೆಗೆ ಉದ್ಯೋಗ ಮುಖ್ಯ : ಡಾ ಅರುಣಕುಮಾರ ಗಾಳಿ

**ಬಾಗಲಕೋಟೆ :** ವಿದ್ಯಾರ್ಥಿಗಳ ಬದುಕಿನಲ್ಲಿ ಉದ್ಯೋಗವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದ್ದು, ವಿದ್ಯಾರ್ಥಿಗಳು ಉದ್ಯೋಗಿಗಳಾಗಿ ಉದ್ಯಮಿಗಳಾಗಬೇಕು ಎಂದು ಪ್ರಾಚಾರ್ಯರಾದ ಡಾ. ಅರುಣ-ಕುಮಾರ ಗಾಳಿ ಅವರು ಹೇಳಿದರು.

ಅವರು ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಬುಧವಾರ ನಡೆದ ಬೆಂಗಳೂರಿನ ಸ್ಪೆಕ್ಟ್ರಂ ಟ್ಯಾಲೆಂಟ್ ಮ್ಯಾನೇಜಮೆಂಟ್ ಪ್ರ.ಲಿ. ಕಂಪನಿಯ ಸಹಯೋಗದಲ್ಲಿ ಆಯೋಜಿಸಿರುವ 2025ರ ಉದ್ಯೋಗ ಮೇಳವನ್ನು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಗಿಸಿದ ನಂತರ ಉದ್ಯೋಗಕ್ಕಾಗಿ ಅಲೆದಾಡುವ ಪರಿಸ್ಥಿತಿ ಇತ್ತು, ನಮ್ಮ ಕಾಲೇಜಿನಲ್ಲಿ ಶಿಕ್ಷಣ ನೀಡುವದರ ಜೊತೆಗೆ ವಿದ್ಯಾರ್ಥಿಗಳ ಬಾವಿಭವಿಷ್ಯಕ್ಕಾಗಿ ಪ್ರತಿವರ್ಷದಂತೆ ಈ ವರ್ಷವೂ ಕೂಡಾ ನಾವು ಉದ್ಯೋಗ ಮೇಳ ಆಯೋಜನೆ ಮಾಡಿದ್ದು, ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಉದ್ಯೋಗ ಪಡೆಯಲು ಸಾಧ್ಯವಾಗುತ್ತಿದೆ. ಇಂತಹ ಮೇಳಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಉದ್ಯೋಗವನ್ನು ಹೊಂದಬೇಕು. ನಮ್ಮ ಕಾಲೇಜಿನ ಹಲವಾರು ವಿದ್ಯಾರ್ಥಿಗಳು ಇಂತಹ ಉದ್ಯೋಗ ಮೇಳಗಳ ಮೂಲಕ ಉದ್ಯೋಗ ಪಡೆದು ಉತ್ತಮ ಸ್ಥಾನದಲ್ಲಿರುವುದು ಕಾಲೇಜಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು.





ಬೆಂಗಳೂರಿನ ಸ್ಪೆಕ್ಟ್ರಂ ಟ್ಯಾಲೆಂಟ್ ಮ್ಯಾನೇಜಮೆಂಟ್ ಪ್ರ.ಲಿ.ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ಪ್ರಭು ಎಸ್ ಅವರು ಮಾತನಾಡಿ ವಿದ್ಯಾರ್ಥಿಗಳು ಪದವಿ ಶಿಕ್ಷಣ ಮುಗಿಸಿದ ನಂತರ ಅವರ ಜೀವನ ಆರ್ಥಿಕವಾಗಿ ಸದೃಢವಾಗಬೇಕಾದರೆ ಮೊದಲು ಉದ್ಯೋಗವನ್ನು ಮಾಡುವ ಮನೋಭಾವವನ್ನುಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಡಾ.ಜಿ.ಜಿ.ಹಿರೇಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳಿಗೆ ಉದ್ಯೋಗ ನೀಡುವ ಸದಾಶಯದೊಂದಿಗೆ ಉದ್ಯೋಗ ಕೊಡುವವರನ್ನು ಹಾಗೂ ಉದ್ಯೋಗ ಆಕಾಂಕ್ಷಿಗಳನ್ನು ಈ ಮೇಳದ ಮೂಲಕ ಒಂದೇ ವೇದಿಕೆಯಲ್ಲಿ ಕರೆ ತಂದು ಉದ್ಯೋಗ ಅವಕಾಶವನ್ನು ಕಲ್ಪಿಸುವ ಕಾರ್ಯವನ್ನು ಕಾಲೇಜು ಮಾಡುತ್ತಿದೆ ಎಂದರು. ಸ್ಪೆಕ್ಟ್ರಂ ಟ್ಯಾಲೆಂಟ್ ಮ್ಯಾನೇಜಮೆಂಟ್ ಪ್ರ.ಲಿ.ಕಂಪನಿಯ ಇನ್ನೋರ್ವ ಮಾನವ ಸಂಪನ್ಮೂಲ ಅಧಿಕಾರಿ ಸುಷ್ಮೀತಾ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು.ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಸ್ವಾಗತಿಸಿದರು, ಡಾ.ಸುಮಂಗಲಾ ಮೇಟಿ ನಿರೂಪಿಸಿದರು, ಉಪನ್ಯಾಸಕ ದೇವೆಂದ್ರ ನಾಯಕ ವಂದಿಸಿದರು. ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಸಿ.ಎ, ಪದವಿ ಪಡೆದಿರುವ 486 ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದರು. ಇದರಲ್ಲಿ 200 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ 14,700 ಸಂಬಳದೊಂದಿಗೆ ವಸತಿ, ಊಟ ಹಾಗೂ ಸಾರಿಗೆ ವೆಚ್ಚವನ್ನು ಉಚಿತವಾಗಿ ನೀಡಲಾಗುತ್ತದೆಂದು ಎಂದು ಬೆಂಗಳೂ-ರಿನ ಸ್ಪೆಕ್ಟ್ರಂ ಟ್ಯಾಲೆಂಟ್ ಮ್ಯಾನೇಜಮೆಂಟ್ ಪ್ರ.ಲಿ.ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿ ಪ್ರಭು ಎಸ್ ತಿಳಿಸಿದರು.

# ರಾಜಶ್ರೀ ಜುಗತಿಯವರಿಗೆ ಸನ್ಮಾನ



**ವಿಜಯಪುರ :** ಶ್ರದ್ಧೆ, ಪ್ರಾಮಾಣಿಕತೆಯ, ಸೇವಾ ಮನೋಭಾವ ಇದ್ದರೆ ಸ್ಥಾನಮಾನಗಳು ತಾವಾಗಲೇ ಹುಡುಕಿಕೊಂಡು ಬರುತ್ತವೆ, ಪ್ರತಿಯೊಬ್ಬರು ಶ್ರದ್ಧಾ ಮನೋಭಾವನೆಯಿಂದ ತಮ್ಮ ಕಾರ್ಯದಲ್ಲಿ ನಿರತರಾದರೆ ಯಶಸ್ಸು ಶತಸಿದ್ಧ ಎಂದು ಚೇತನಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ರಾಜಶ್ರೀ ಜಗುತಿ ಹೇಳಿದರು.
ಏಷ್ಯಾ ನೆಟ್ ಸುವರ್ಣ ನ್ಯೂಸ್ ಮತ್ತು ನಾಡಿನ ಕನ್ನಡಪ್ರಭ ಪತ್ರಿಕೆ ಕೊಡಮಾಡುವ ಸುವರ್ಣ ಸಾಧಕಿ ಪ್ರಶಸ್ತಿ ಪಡೆದುಕೊಂಡ ಪ್ರಯುಕ್ತ ಶಿಕ್ಷಣ ಸಂಸ್ಥೆ ಆವರಣದಲ್ಲಿ ಚೇತನಾ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಹಮ್ಮಿಕೊಂಡ ಸನ್ಮಾನ ಸಮಾರಂಭದಲ್ಲಿ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು.
ಮುಖ್ಯೋಪಾಧ್ಯಾಯ ಸಾಹಿತಿ ಪ್ರೊ, ಎ.ಎಚ್. ಕೊಳಮಲಿ ಮಾತನಾಡಿ, ಶಿಕ್ಷಣ ತಜ್ಞ, ದಿ, ದಯಾನಂದ ಜುಗತಿಯವರ ಕನಸಿನ ಕೂಸಾದ ಚೇತನಾ ಶಿಕ್ಷಣ ಸಂಸ್ಥೆ ಇಂದು ಅಧ್ಯಕ್ಷೆ ರಾಜಶ್ರೀ ಜುಗತಿ ಅವರ ಆಡಳಿತದ ಕಾರ್ಯ ವೈಖರತೆಯಿಂದ ಚೇತನಾ ಸಂಸ್ಥೆ ಇಂದು ರಾಜ್ಯ ವ್ಯಾಪ್ತಿ ಹೆಸರುವಾಸಿಯಾಗಿದೆ ಎಂದು ಹೇಳಿದರು. ಸಹಾಯಕ ಆಡಳಿತ ಅಧಿಕಾರಿ ಪ್ರಮೋದ ಕುಲಕರ್ಣಿ, ಹೈಸ್ಕೂಲ್ ವಿಭಾಗದ ಸಿಬ್ಬಂದಿ ವರ್ಗ ಸಿ.ಎಸ್. ವಾಲಿ, ಸಾಗರ ಕುಲಕರ್ಣಿ ಸೇರಿದಂತೆ ಶಿಕ್ಷಕ, ಶಿಕ್ಷಕಿ ವೃಂದ ಉಪಸ್ಥಿತರಿದ್ದರು.

# ಬ್ಯಾಂಕ್ ಅಧಿಕಾರಿಗಳಿಗೆ ಸಿಸಿಟಿವಿ ಅಳವಡಿಸುವಂತೆ ಪೊಲೀಸರಿಂದ ನೋಟಿಸ್



**ಕೊಲ್ಹಾರ :** ಪಟ್ಟಣದಲ್ಲಿರುವ ವಿವಿಧ ಬ್ಯಾಂಕ್ ಅಧಿಕಾರಿಗಳಿಗೆ ಪೊಲೀಸ್ ಅಧಿಕಾ-ರಿಗಳಿಂದ ಬುಧವಾರ ಕಡ್ಡಾಯವಾಗಿ ಸಿಸಿಟಿವಿ ಅಳವಡಿಸುವಂತೆ ಜಾಗೃತಿ ಮೂಡಿಸಿ ನೋಟಿಸ್ ನೀಡಿದರು. ಬ್ಯಾಂಕ್ ಸಿಬ್ಬಂದಿಗಳು ಕಡ್ಡಾಯವಾಗಿ ತಮ್ಮ ಬ್ಯಾಂಕುಗಳಲ್ಲಿ ಗುಣಮಟ್ಟದ ಸಿಸಿಟಿವಿ ಅಳವಡಿಸಬೇಕು ಮತ್ತು ಎಟಿಎಂ ಗಳಲ್ಲಿ ಹಗಲು ಮತ್ತು ರಾತ್ರಿ ಸರದಿಯಲ್ಲಿ ಸೆಕ್ಯೂರಿಟಿಗಳನ್ನು ನೇಮಕ ಮಾಡಿಕೊಳ್ಳಬೇಕು ಹಾಗೂ ಇದರಿಂದ ಕಳ್ಳತನ ಪ್ರಕರಣಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಪಟ್ಟಣದ ಪೊಲೀಸ್ ಠಾಣೆ ಪಿಎಸ್ಐ ಎಂ ಬಿ ಬಿರಾದಾರ್ ಮಾಹಿತಿ ತಿಳಿಸಿದ್ದರು.

# ಭಾರತದಲ್ಲಿ ಹಿಂದೂ ರಾಷ್ಟ್ರ ನಿರ್ಮಾಣ ನಮ್ಮ ಗುರಿ: ತೊಗಾಡಿಯಾ



**ವಿಜಯಪುರ :** ಭಾರತ ಹಿಂದೂ ರಾಷ್ಟ್ರವಾಗಬೇಕು, ಹಿಂದೂ ರಾಷ್ಟ್ರವನ್ನಾಗಿ ಮಾಡುತ್ತೇವೆ ಎಂದು ಅಂತಾರಾಷ್ಟ್ರೀಯ ಹಿಂದೂ ಪರಿಷತ್ ಹಾಗೂ ರಾಷ್ಟ್ರೀಯ ಬಜರಂಗ ದಳ ಮುಖಂಡ ಪ್ರವೀಣ ಭಾಯ್ ತೊಗಾಡಿಯಾ ಹೇಳಿದರು.
ಬುಧವಾರ ವಿಜಯಪುರ ನಗರದ ಖಾಸಗಿ ಹೊಟೇಲ್ ನಲ್ಲಿ ಸುದ್ಧಿಗಾರರ ಜೊತೆಗೆ ಮಾತನಾಡಿದರು.
ರಾಮಮಂದಿರನಿರ್ಮಾಣಕ್ಕಾಗಿಹೋರಾಟ ಮಾಡಿದ್ದೇವು.
ಅಯೋಧ್ಯೆಯಲ್ಲಿ ಒಂದು ಲಕ್ಷ ಜನರನ್ನು ಸೇರಿಸಿ ಮಂದಿರಕ್ಕಾಗಿ ಹೋರಾಟ ಮಾಡಿದ್ದೇವೆ. ಮಹಾಮಾರಿ ಕೊರೋನಾ ವೇಳೆ ದೇಶದಲ್ಲಿ 578 ಉಚಿತ ಆಹಾರ ಮಳಿಗೆಗಳನ್ನು ಸ್ಥಾಪನೆ ಮಾಡಿದ್ದೇವೆ.
ಕುಂಭ ಮೇಳದಲ್ಲಿ ಉಚಿತ ಅನ್ನದಾಸೋಹ ವಸತಿ ಸೌಲಭ್ಯ ಒಂದೂವರೆ ತಿಂಗಳು ಕಾಲ ಸೇವೆ ಮಾಡಿದ್ದೇವೆ. ಒಂದು ಲಕ್ಷ ಹೊದಿಕೆಗಳನ್ನು ನೀಡಿದ್ದೇವು ಎಂದು ತಿಳಿಸಿದರು.
ಪ್ರತಿ ಶನಿವಾರ ಸಾಯಂಕಾಲ ಎಲ್ಲರೂ ಕೂಡಿ ಹನುಮಾನ್ ಚಾಲೀಸ್ ಪಠಣೆ ಮಾಡುವ ಗುರಿ ನಮ್ಮದಾಗಿದೆ.
ಒಂದು ಲಕ್ಷ ಸ್ಥಳಗಳಲ್ಲಿ ಹನುಮಾನ್ ಚಾಲೀಸ್ ಪಠಣ ಮಾಡುವ ಗುರಿ ಇದೆ.
ಹನುಮಾನ್ ಚಾಲೀಸ್ ನಿಂದ ಸಮೃದ್ಧಿ, ಸುರಕ್ಷೆ, ಆರೋಗ್ಯ, ಮಕ್ಕಳ ಅಭಿವೃದ್ಧಿ, ಮಹಿಳಾ ಸುರಕ್ಷತೆ, ಉದ್ಯೋಗ, ಹಿಂದೂ ಡೆವೆಲಪ್ಮೆಂಟ್ ಸೆಂಟರ್ ಮೂಲಕ ಬಡವರಿಗೆ ಸಹಾಯ ಮಾಡುವ ಉದ್ದೇಶವಿದೆ ಎಂದರು.
ಹನುಮಾನ್ ಚಾಲೀಸ್ ಮೂಲಕ ಹಿಂದೂ ಸಂಘಟನೆ ಮಾಡುತ್ತಿದ್ದೇವೆ.
ದೇಶದಲ್ಲಿ ಯಾವ ಸ್ಥಳದಲ್ಲಾದರೂ ಹಿಂದೂಗಳಿಗೆ ಸಹಾಯ ಮಾಡಲು ಸಂಘಟನೆ ಬದ್ಧವಾಗಿದೆ. ಉಚಿತ ಕರೆ ಮಾಡಿ ಸಹಾಯ ಪಡೆಯಬಹುದು ಎಂದು ನುಡಿದರು.
ಕಾಯ್ದೆ ಹಾಗೂ ದಂಡನೆಯಿಂದ ಹಿಂದುತ್ವ ಬೆಳೆಸುತ್ತೇವೆ. ಬಾಂಗ್ಲಾ ನುಸುಳುಕೋರರ ತಡೆಯಬೇಕು. ಜನಸಂಖ್ಯಾ ನಿಯಂತ್ರಣ ಕಾಯ್ದೆ ಜಾರಿಯಾಗಬೇಕು. ಹಿಂದೂಗಳು ಮೂವರು ಅಥವಾ ಇಬ್ಬರು ಮಕ್ಕಳನ್ನು ಹೊಂದಬೇಕು. ಇದು ಪ್ರವೀಣ ಭಾಯ್ ತೊಗಾಡಿಯಾ ಬ್ರಹ್ಮೋಸ್ ಮಿಸೈಲ್ ಎಂದರು.
ಭಾರತದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದೇವೆ.
ದೇಶದಲ್ಲಿ ಹಿಂದೂಗಳನ್ನು ಬಹುಸಂಖ್ಯಾತರನ್ನಾಗಿ ಮಾಡುವುದೇ ಮುಖ್ಯ ಉದ್ದೇಶ. ಹಿಂದೂಗಳು ತಮ್ಮ ದೈನಂದಿನ ವ್ಯವಹಾರ ಕೆಲಸ ಕಾರ್ಯ ಯಾರ ಜೊತೆ ಮಾಡಬೇಕೆಂಬುದನ್ನು ತೀರ್ಮಾನಿಸಲಿ ಎಂದು ನುಡಿದರು.
ಮಂಗಳೂರಿನಲ್ಲಿ ಕೋಮು ಘರ್ಷಣೆ ಘಟನೆ ಕುರಿತ ಪ್ರಶ್ನೆಗೆ ಉತ್ತರಿಸಿದ ತೊಗಾಡಿಯಾ, ಸಮರ್ಪಕ ಮಾಹಿತಿ ಇಲ್ಲದೇ ಮಾತನಾಡಲಾರೆ ಎಂದು ಹೇಳಿದರು.
ಆಪರೇಷನ್ ಸಿಂಧೂರ ಮುಗಿಸಿಲ್ಲ ಎಂಬುದು ಖುಷಿಯ ವಿಚಾರವಾಗಿದೆ.
ದೇಶದ ಸೈನಿಕರು ಸಮರ್ಥವಾಗಿ ರಕ್ಷಣೆ ಮಾಡುತ್ತಿದ್ದಾರೆ.
ದೇಶದಲ್ಲಿ ರೈತರ ಆತ್ಮಹತ್ಯೆ ವಿಚಾರ ಕು-ರಿತ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಖರ್ಚು ಹೆಚ್ಚಾಗುತ್ತಿವೆ. ಉತ್ಪಾದನೆ ಕಡಿಮೆಯಾಗುತ್ತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಾಲ್ಕು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಂದೆ ನಾನು ಲಕ್ಷಾಂತರ ರೈತರೊಂದಿಗೆ ಹೋರಾಟ ಮಾಡುತ್ತೇವೆ ಎಂದರು.
ಅಹಮದಾಬಾದ್ ನಲ್ಲಿ ವಿಮಾನ ಅವಘಡ ದುಃಖದ ಸಂಗತಿ.
ತನಿಖೆಯಲ್ಲಿ ಘಟನೆಗೆ ನಿಖರ ಕಾರಣ ತಿಳಿದು ಬರಲಿದೆ.
ವಿಮಾನದಪೈಲಟ್ಉತ್ತಮಪೈಲಟ್ಆಗಿದ್ದ. ಎರಡು ಇಂಜಿನ್ ಒಟ್ಟಿಗೆ ಬಂದ್ ಆಗಿದ್ದವು. ದುರಂತ ಯಾಕೆ ಆಗಿದೆ ಎಂಬುದು ಗೊತ್ತಿಲ್ಲ. ತನಿಖೆಯಲ್ಲಿ ಅವಘಡಕ್ಕೆ ಕಾರಣ ತಿಳಿದು ಬರಲಿದೆ ಎಂದು ಹೇಳಿದರು.
ನಾನು ಯಾವುದೇ ಸರ್ಕಾರಗಳ ಬಗ್ಗೆ ಮಾತನಾಡಲ್ಲ. ಅಧಿಕಾರದಲ್ಲಿದ್ದವರು ಸಮರ್ಥರಿದ್ದಾರೆ.ಪ್ರಧಾನಿ ಮೋದಿ, ಕರ್ನಾಟಕ ಸಿಎಂ ಸಿದ್ದರಾಮಯ್ಯ ಅವರವರ ಕೆಲಸ ಮಾಡುತ್ತಿದ್ದಾರೆ.
ಕೇಂದ್ರ, ರಾಜ್ಯ ಸರ್ಕಾರಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

# ಕೃಷ್ಣ ತೀರದಲ್ಲಿ ನಿಧಿಗಳ್ಳರ ಬಂಧನ



**ಮುದ್ದೇಬಿಹಾಳ :** ತಾಲ್ಲೂಕಿನ ಮದರಿ ಗ್ರಾಮದ ಹತ್ತಿರ ಕೃಷ್ಣಾ ನದಿ ಮುಳುಗಡೆ ಪ್ರದೇಶದಲ್ಲಿ ನಿಧಿಗಾಗಿ ಪ್ರಕೃತಿಯನ್ನು ನಾಶಪಡಿಸುತ್ತಿದ್ದ ಖಚಿತ ಮಾಹಿತಿ ತಿಳಿದ ಗ್ರಾಮಸ್ಥರು ಹಾಗೂ ಆಲೂರು ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಆರೋಪಿಗಳನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ಮಂಗಳವಾರ ತಡ ರಾತ್ರಿ 11-30 ಗಂಟೆಯ ಸುಮಾರಿಗೆ ನಡೆದಿದೆ.
ಘಟನೆ ವಿವರ : ಮದರಿ ಗ್ರಾಮದ ಕೃಷ್ಣಾ ತೀರದಲ್ಲಿ ಮುಳುಗಡೆ ಪ್ರದೇಶವಿದ್ದು ಅಲ್ಲಿ ಕೆಲವರು ಒಂದು ಜೆಸಿಬಿ ಸಹಾಯದಿಂದ ಪಾಳುಬಿದ್ದ ಕಟ್ಟಡದಲ್ಲಿ ಅಗೆಯುತ್ತಿದ್ದರು.ಈ ವಿಷಯ ತಿಳಿದುಕೊಂಡ ಆಲೂರು ಗ್ರಾಪಂ ಪಿಡಿಒ ರಾಜು ನಾರಾಯಣಿ, ಆಲೂರ ಪಂಚಾಯತಿಯ ಕಾರ್ಯದರ್ಶಿ ಸಂಗಪ್ಪ ಬೆಳಗಲ್ಲ, ಗ್ರಾಮ ಆಡಳಿತ ಅಧಿಕಾರಿ ಸುನೀಲ ಚವ್ಹಾಣ ಮತ್ತಿತರರು ಸ್ಥಳಕ್ಕೆ ತೆರಳಿ ಗಮನಿಸಿದಾಗ ಅಲ್ಲಿ ಜೆ.ಸಿ.ಬಿ ಆಪರೇಟರ್ ಸೇರಿದಂತೆ ಒಟ್ಟು 6 ಜನರಿದ್ದರು.ಅವರನ್ನು ಗ್ರಾಮಸ್ಥರ ಸಹಕಾರದಿಂದ ಹಿಡಿದು ವಿಚಾರಿಸಿದಾಗ ನಾವು ಇಲ್ಲಿ ನಿಧಿಗೋಸ್ಕರ ಅಗೆಯುತ್ತಿದ್ದೀವಿ ಎಂದು ತಿಳಿಸಿದ ಕೂಡಲೇ ಅವರನ್ನು ಗ್ರಾಮಸ್ಥರೆಲ್ಲ ಹಿಡಿದು ಕೂಡಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.
ಪೊಲೀಸರು ಸ್ಥಳಕ್ಕೆ ತೆರಳಿ ಗ್ರಾಮಸ್ಥರ ಹಾಗೂ ಪಂಚಾಯಿತಿ ಅಧಿಕಾರಿಗಳ ವಶದಲ್ಲಿದ್ದ ಹಡಲಗೇರಿ ಗ್ರಾಮದ ವಿಠಲ ಇಂಡಿ, ಮುದ್ದೇಬಿಹಾಳದ ಶಾರುಖ್‌ಖಾನ್ ಮುಲ್ಲಾ,ಕಮತಗಿಯ ಅಂಗಯ್ಯ ಪಾಪನಾಳಮಠ , ಕೃಷ್ಣ ಹುಗ್ಗಿ,ರಮೇಶ ವಡ್ಡರ ಜೆಸಿಬಿ ಆಪರೇಟರ್ ಕುಂಟೋಜಿಯ ಯಲ್ಲಪ್ಪ ಚಲವಾದಿ ಅವರನ್ನು ವಶಕ್ಕೆ ಪಡೆದು ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ.
ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಾಗೆ ಅಗೆಯಲು ಬಳಿಸಿದ್ದ ಜೆಸಿಬಿ ನಂ. ಕೆ.ಎ.28 ಎಂ. 8991 ಪೊಲೀಸ್‌ರು ವಶಕ್ಕೆ ಪಡೆದುಕೊಂಡಿದ್ದಾರೆ.

**ಪ್ರಭಾವಿಗಳ ರಕ್ಷಣೆ :**
ನಿಧಿಗಳ್ಳತನಕ್ಕೆ ಕುಮ್ಮಕ್ಕು ಕೊಟ್ಟವರು ಪ್ರಭಾವಿಗಳಿದ್ದು ಅವರ ವಿರುದ್ಧ ಪ್ರಕರಣವನ್ನು ದಾಖಲಿಸದೇ ಪ್ರಕರಣದಲ್ಲಿ ಭಾಗಿಯಾದ ಸಾಮಾನ್ಯ ವ್ಯಕ್ತಿಗಳ ಹೆಸರನ್ನು ಸೇರಿಸಲಾಗಿದ್ದು ನಿಜವಾಗಿ ನಿಧಿ ಅಗೆಸಲು ಕರೆಯಿಸಿದ ಪ್ರಭಾವಿಗಳ ಹೆಸರನ್ನು ಪೊಲೀಸರು ಕೈ ಬಿಟ್ಟಿದ್ದಾರೆ ಎಂದು ಗ್ರಾಮದ ವಾಲ್ಮೀಕಿ ಸಮಾಜದ ಮುಖಂಡ ಶಿವು ಕನ್ನೊಳ್ಳಿ ಆರೋಪಿಸಿದ್ದಾರೆ.

# ಸಾರ್ವಜನಿಕರಿಗೆ ವಿದ್ಯುತ್ತ ಸಂಪರ್ಕ ನೀಡುವಲ್ಲಿ ಸರಕಾರ ವಿಫಲ ಖಂಡಿಸಿ ಮನವಿ



**ವಿಜಯಪುರ :** ಸಾರ್ವಜನಿಕರಿಗೆ ವಿದ್ಯುತ್ತ ಸಂಪರ್ಕ ನೀಡುವಲ್ಲಿ ಸರಕಾರ ವಿಫಲವಾಗಿರುವದನ್ನು ಖಂಡಿಸಿ ಬುದ್ದ ವಿಹಾರದಿಂದ ಹೆಸ್ಕಾಂ ವಿಭಾಗೀಯ ಕಛೇ-ರಿಯವರೆಗೆ ಇಂದನ ಸಚಿವರ ಅಣಕು ಶವಯಾತ್ರೆ ಮೆರವಣಿಗೆ ಹಮ್ಮಿಕೊಂಡು ಪ್ರತಿಕೃತ ದಹನ ಮಾಡುವುದರ ಮುಖಾಂತರ ವಿಜಯಪುರ ತಹಶೀಲ್ದಾರ, ಮಹಾನಗರ ಪಾಲಿಕೆ ಆಯುಕ್ತರು, ಹಾಗೂ ಅಧೀಕ್ಷಕ ಅಭಿಯಂತರರು ಹೆಸ್ಕಾಂ ಇವರ ಮುಖಾಂತರ ರೈತ ಭಾರತ ಪಕ್ಷದ (ರಿ) ಕರ್ನಾಟಕದ ವತಿಯಿಂದ ಇಂಧನ ಸಚಿವರಿಗೆ ಮನವಿ ಸಲ್ಲಿಸಲಾಯಿತು.
ಇದೇ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಕೆಂಗನಾಳ ಮಾತನಾಡಿ, ಆಯುಕ್ತರು ಮಹಾನಗರ ಪಾಲಿಕೆ ವಿಜಯಪುರ ಅವರು ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ವಿಜಯಪುರ ಅವರಿಗೆ ಪತ್ರ ಬರೆದು ಸಂಬಂದಿಸಿದ ಮಹಾನಗರ ಪಾಲಿಕೆಯು ಕೊಡುವ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣ ಪತ್ರ ಕೊಟ್ಟರೆ ಮಾತ್ರ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ತಿಳಿಸಿ ಪತ್ರ ಬರೆದಿದ್ದಾರೆ.
ಆದರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರದೆ ಇರುವ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡವರಿಗೆ ಯಾರು ಕಟ್ಟಡ ಮುಕ್ತಾಯ ಪ್ರಮಾಣ ಪತ್ರ ಕೊಡುತ್ತಾರೆ ?
ಇಂತಹ ಆದೇಶದಿಂದಾಗೆ ಬಡವ, ನಿರ್ಗತಿಕ ನಿವೇಶನದಾರರಿಗೆ ವಿದ್ಯುತ್ ಪಡೆಯಲು ಹಾಗೂ ಕುಡಿಯುವ ನೀರು ಸಂಪರ್ಕ ಪಡೆಯಲು ಸಾದ್ಯವಾಗುವದಿಲ್ಲ ಇದರಿಂದಾಗಿ ಬಡತನ ರೇಖೆಗಿಂತ ಕಡಿಮೆ ಆದಾಯಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವವರಿಗೆ ನಾಗರೀಕ ಸೌಲಭ್ಯವಂಚಿತವಾಗಿ ಮಕ್ಕಳ ಶಿಕ್ಷಣ ಹಾಗೂ ಇತರ ಅನೇಕ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ.
ಈ ಹಿಂದೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರದೆ ಇರುವ ಕಟ್ಟಡಗಳಿಗೆ ಹಾಗೂ ಕುಡಿಯುವ ನೀರಿನ ಸೌಲಭ್ಯವನ್ನು ಕೊಟ್ಟಿರುತ್ತಾರೆ ಹಾಗೂ ಚರಂಡಿ ರಸ್ತೆಗಳನ್ನು ನಿರ್ಮಿಸಿರುತ್ತಾರೆ ಮತ್ತು ವಿದ್ಯುತ್ ಕಂಬಗಳನ್ನು ಸರಿಪಡಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಸಿರುತ್ತಾರೆ.
ಈಗ ಈ ರೀತಿಯಾಗಿ ತಕ್ಷಣ ನಾಗರೀಕರ ಅವಶ್ಯವಾದ ಸೌಲಭ್ಯಗಳನ್ನು ನಿಲ್ಲಿಸುವುದು ಯಾವ ನ್ಯಾಯ ?
ಕೂಡಲೇ ಸಾರ್ವಜನಿಕ-ರಿಗೆ ತಾತ್ಕಾಲಿಕ ಹಾಗೂ ಶಾಶ್ವತ ವಿದ್ಯುತ್ ಸಂಪರ್ಕವನ್ನು ನೀಡಲು ಆದೇಶ ಮಾಡಬೇಕಾಗಿ ವಿನಂತಿ
ಪ್ರತಿ ವರ್ಷ ಗ್ರಾಹಕರಿಗೆ ಎ.ಎಸ್.ಡಿ ಹಣವನ್ನು ತುಂಬಿಸಿಕೊಳ್ಳುತ್ತಿದ್ದು ಇದರ ಬಗ್ಗೆ ಹೆಸ್ಕಾಂ ಎಮ್.ಡಿ ಹಾಗೂ ಡಿ.ಟಿ ಅವರಿಗೆ ತಿಳಿ ಹೇಳಿದರು ಪ್ರಯೋಜನವಾಗಿಲ್ಲ ಆದಕಾರಣ 48,101 ಇದರಲ್ಲಿಯೇ ತುಂಬಿಸಿಕೊಳ್ಳ ಬೇಕೆಂದು ಆದೇಶ ಮಾಡಿಸಬೇಕು.
ವಿಜಯಪುರ ನಗರದಲ್ಲಿ ಎಲ್ಲಾ ಹೆಸ್ಕಾಂ ಉಪ ವಿಭಾಗಗಳನ್ನು ಅಂದರೆ ನಗರ ಉಪ ವಿಭಾಗ 1, 2, ಗ್ರಾಮೀಣ ಉಪವಿಭಾಗ ಹಾಗೂ ಎಂ,ಟಿ ಉಪವಿಭಾಗಗಳನ್ನು ಒಂದೇ ಕಡೆ ಮಾಡಿಸಿ ಜನರಿಗೆ ಅನೂಕುಲ ಮಾಡಿಕೋಡಬೇಕು.
ಹೆಸ್ಕಾಂ ಹಾಗೂ ನಗರಾಭಿವೃದ್ಧಿ ಇಲಾಖೆಯಲ್ಲಿ ಬ್ರಷ್ಟಾಚಾರ ತಾಂಡವವಾಡುತ್ತಿದ್ದು ಕೂಡಲೆ ಕ್ರಮ ಜರುಗಿಸಬೇಕು.
ಈ ಗಂಭೀರ ವಿಷಯದಲ್ಲಿ ಸರಕಾರದ ಗಮನಕ್ಕೆ ತಂದು ಸೂಕ್ತಪರಿಹಾರ ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಮನವಿ ಸಲ್ಲಿಸುತ್ತೇವೆ.
ಬೇಗನೆ ಈ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ಹೆಸ್ಕಾಂ ಹಾಗೂ ಮಹಾನಗರ ಪಾಲಿಕೆಯ ಕಚೇ-ರಿಗಳ ಮುಂದೆ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಮಾಡಲಾಗುವದೆಂದು ತಮಗೆ ಹೇಳ ಬಯಸುತ್ತೇವೆ ಎಂದರು.
ಇದೇ ಸಂದರ್ಭದಲ್ಲಿ ಸೈಯದ್ ಯಾಸೀನ ಗುಲಬರ್ಗಾ, ಮಲ್ಲು ಆಸಂಗಿ,ಹರೀಶಕುಲಕರ್ಣಿ,ಸೌಮ್ಯ ನಾರಾಯಣಕರ, ಅರುಣ್ ಶೇಖ್ ಶ್ರೀಶೈಲ್ ಗನತಿ, ವಿಜಯಪುರ ವಿದ್ಯುತ್ ಗುತ್ತಿಗೆದಾರರಿ ಸಂಘದ ಪದಾಧಿಕಾರಿಗಳಾದ ತೊದಲಬಾಗಿ ರೈತ ಮುಖಂಡರು ನೂರಾರು ಜನ ಪಾಲ್ಗೊಂಡಿದ್ದರು.

# ವನ್ಯಜೀವಿಗಳು ಮನುಕುಲಕ್ಕೆ ಉಪಕಾರಿ: ಕೊಟ್ಟೂರ



**ಮುದ್ದೇಬಿಹಾಳ :** ವನ್ಯಜೀವಿಗಳು ಮನುಕುಲಕ್ಕೆ ಉಪಕಾರಿಯಾಗಿವೆ ಎಂದು ಹೊಸಪೇಟೆ ಸರ್ಕಾರಿ ಪಪೂ ಕಾಲೇಜಿನ ಉಪನ್ಯಾಸಕ ಸಮದ್ ಕೊಟ್ಟೂರ ಹೇಳಿದರು.
ತಾಲ್ಲೂಕಿನ ಬಿದರಕುಂದಿಯಲ್ಲಿ ಪ್ರಾದೇಶಿಕ ಅರಣ್ಯ ವಿಭಾಗ ವಿಜಯಪುರ , ಪ್ರಾದೇಶಿಕ ಅರಣ್ಯ ವಲಯ ಮುದ್ದೇಬಿಹಾಳ ಮತ್ತು ಸರ್ಕಾರಿ ಆದರ್ಶ ವಿದ್ಯಾಲಯದ ಬಿದರಕುಂದಿ ಇವರ ಸಂಯುಕ್ತ ಆಶಯದಲ್ಲಿ ಮಂಗಳವಾರ ನಡೆದ ವಿಶ್ವ ಮೊಸಳೆ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
1975 ರಲ್ಲಿ ವಿಶ್ವಸಂಸ್ಥೆ ವಿಶ್ವ ಮೊಸಳೆ ದಿನ ಎಂದು ಘೋಷಣೆ ಮಾಡಿದೆ.ಮೊಸಳೆ ಜೀವಿತಕಾಲ ಅವಗಳ ಪ್ರಭೇದ, ವಿಧಗಳು, ವಿವಿಧ ರಾಜ್ಯಗಳು ಮತ್ತು ದೇಶಗಳಲ್ಲಿ ಬೇರೆ ಬೇರೆ ಪ್ರಭೇದದ ಮೊಸಳೆಗಳು ಇವೆ ಎಂಬುದನ್ನು ತಿಳಿಸಿದರು.
ವಿಜಯಪುರ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಶರಣಯ್ಯ ಮಾತನಾಡಿ, ವನ್ಯಜೀವಿಗಳನ್ನು ನಾಶ ಮಾಡದೇ ಪ್ರಕೃತಿಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಅವುಗಳ ಉಳಿವು ಅಗತ್ಯ ಎಂದರು.
ಕಾರ್ಯಕ್ರಮ ಉದ್ಘಾಟಿಸಿದ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಸ್.ಎಲ್.ಪಾಟೀಲ್ ಮಾತನಾಡಿ,ಅರಣ್ಯಗಳನ್ನುಸಂರಕ್ಷಿಸುವದ-ರಿಂದ ಶುದ್ಧ ಗಾಳಿ ಸಿಗುವುದು. ಮನಕುಲಕ್ಕೆ ಬೆಲೆ ಕಟ್ಟಲಾಗದಷ್ಟು ಬದುಕಲು ಅವಕಾಶ ಮಾಡಿಕೊಡುತ್ತದೆ ಎಂದರು.
ವನ್ಯಜೀವಿಗಳ ಸಂರಕ್ಷಣೆ ಮಾಡುತ್ತಿರುವ ತಂಗಡಗಿ ಗ್ರಾಮದ ಸ್ನೇಕ್ ಭಾಷಾ ಚಪ್ಪರಬಂದ್,ನಾಗೇಶ್‌ವಡ್ಡರ್,ಯಮನಪ್ಪ ಗೊಲ್ಲರ, ಎಸ್.ವೈ.ಯರಝರಿ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಮೊಸಳೆ , ವಿಷ ಜಂತು ಹಾವುಗಳು ಯಾವುದೇ ರೀತಿ ಜನರಿಗೆ ಹಾನಿಯಾಗದಂತೆ ಮತ್ತು ಜಲಚರಗಳನ್ನು ಸಂರಕ್ಷಣೆ ಮಾಡುತ್ತಿರುವ ಕಾರಣ ಅವರಿಗೆ 10 ಲಕ್ಷ ರೂ. ವಿಮಾ ನೋಂದಣಿ ಬಾಂಡ್ ನೀಡಿ ಸನ್ಮಾನಿಸಿದರು.
ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಭಾಗ್ಯವಂತ ಮಸೂದಿ,ವಲಯ ಅರಣ್ಯಾಧಿಕಾರಿ ಬಸನಗೌಡ ಬಿರಾದಾರ,ಇಂಡಿ ಅರಣ್ಯಾಧಿಕಾರಿ ಎಸ್.ಜೆ.ಸಂಗಾಲಕ, ಮುಖ್ಯಗುರು ಅನಿಲ್‌ಕುಮಾರ್ ರಾಥೋಡ ,ರಾಜೇಂದ್ರ ಹೊನ್ನೂರ್,ಎ.ಸಿ.ಕೆರೂರ, ಎನ್ .ಎಸ್.ಬಿರಾದಾರ,ವಿಠ್ಠಲ್ ಬರಟಗಿ ಕಾರ್ಯಕ್ರಮ ನಿರ್ವಹಿಸಿದರು.

# ಮಹಿಳೆಯರ ಸ್ವತಂತ್ರ ಸಂಚಾರಕ್ಕೆ ಆಸರೆಯಾದ ಶಕ್ತಿ ಯೋಜನೆ..!

ಕರುನಾಡಿನ ಎಲ್ಲಾ ಮಹಿಳಾ ನಾಗರಿಕ-ರಿಗೆ ಅವರ ಸಾಮಾಜಿಕ ಸ್ಥಾನಮಾನ, ಗುಣಮಟ್ಟದ ಅಭಿವೃದ್ಧಿ ಪಡಿಸಿಕೊಳ್ಳಲು, ಇತರರ ಮೇಲೆ ಅವಲಂಬನೆಯಾಗದೆ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಎರಡು ವರ್ಷ ಯಶಸ್ವಿಯಾಗಿ ಪೂರೈಸುವುದರ ಮೂಲಕ ಮಹಿಳೆಯರ ಸ್ವಾವಲಂಬಿ ಹಾಗೂ ಆರ್ಥಿಕವಾಗಿ ಸ್ವತಂತ್ರರಾಗಿ ಬದುಕುವ ಕನಸು ಸಾಕಾರವಾಗುತ್ತಿದೆ.
ಎಐಗಳಂತಹ ತಂತ್ರಜ್ಞಾನ ಬಳಕೆಯಲ್ಲಿರುವ ಈ ಕಾಲಘಟ್ಟದಲ್ಲಿ ಇನ್ನು ಕೆಲವು ಕಡೆ ನಾಲ್ಕು ಚೌಕಟ್ಟಿನಲ್ಲಿಯೇ ಜೀವನ ಸಾಗಿಸುತ್ತಿರುವ ಮಹಿಳೆಯರ ಒಂದು ಗುಂಪಾದರೇ. ಸಂಚಾರ ಮಾಡಿದರೆ ಎಲ್ಲಿ ಸಾರಿಗೆ ವೆಚ್ಚ ತಗಲುತ್ತದೆ ಎಂದು ವರ್ಷದಲ್ಲಿ ಒಂದು ಬಾರಿ ಮನೆದೇವರ ಜಾತ್ರೆ ಹೆಸರಿನಲ್ಲಿ ಪ್ರಯಾಣ ಬೆಳೆಸಿದರೆ ಮತ್ತೇ ಮನೆ, ಮನೆಗೆಲಸ ಎಂದು ಮನೆಗೆ ಸಿಮೀತವಾಗುವ ಮಹಿಳೆಯರ ಇನ್ನೊಂದು ಗುಂಪು. ಅಲ್ಪ ಸ್ವಲ್ಪ ಸಂಚಾರ ಮಾಡಿದರೂ ಅದು ಮನೆಗೆ ದಿನಸಿ, ತರಕಾರಿ ತರುವ ಕಾರ್ಯಕ್ಕಾಗಿಯೋಅಥವಾ ಸಂಬಂಧಿಗಳ ಮನೆಗೆ ಭೇಟಿ ನೀಡುವುದಾಗಿರುತ್ತಿತ್ತು.
ಆದರೆ, ಈ ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದಲೂ ಕಾರಣವಿದ್ದರೂ ಕಾರಣವಿಲ್ಲದಿದ್ದೂ ಬಸ್‌ನಲ್ಲಿ ಮಹಿಳೆಯರ ಪ್ರಯಾಣದ ಸಂಖ್ಯೆ ಏರಿಕೆಯಾಗುತ್ತಿದೆ ಎನ್ನಬಹುದು. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಈಗಪುರುಷರಿಗಿಂತಹೆಚ್ಚುಮಹಿಳೆಯರನ್ನೇ ನಾವು ಕಾಣಬಹುದಾಗಿದೆ. ಇದರಿಂದ ಅವರು ಆರ್ಥಿಕ, ಸಾಮಾಜಿಕ ಬೆಲಿಗಳಿಂದ ತಕ್ಕ ಮಟ್ಟಿಗೆ ಮುಕ್ತರಾಗಿ ಹಗಲಿನಲ್ಲಷ್ಟೇ ಅಲ್ಲದೇ ರಾತ್ರಿ ಸಮಯದಲ್ಲಿ ಭಯವಿಲ್ಲದೆ ಪ್ರಯಾಣವನ್ನು ಬೆಳೆಸುತ್ತಿರುವ ಸಂಗತಿ ಮಹಿಳಾ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.
ಅಬ್ಬಾ..!ಉಚಿತ ಬಸ್ ಪ್ರಯಾಣದಿಂದ ಈಗ ಸಾರಿಗೆಯ ವೆಚ್ಚದ ಚಿಂತೆ ಬಿಟ್ಟು ಇಂಟರವ್ಯೂವ ನೀಡುವ ತಯಾರಿ ನಡೆಸಿದೆ ಎಂದು ಬೆಂಗಳೂರಿನ ಕಂಪನಿಯಲ್ಲಿ ಉದ್ಯೋಗಾಕಾಂಕ್ಷಿಯ ನುಡಿಗಳು ಒಂದೆಡೆಯಾದರೆ, ಕುಟುಂಬ ನಿರ್ವಹಣೆಯಲ್ಲಿ ಖರ್ಚಿನ ಬರೆಗೆ ಪ್ರವಾಸದ ಕನಸನ್ನು ನನಸು ಮಾಡಲು ಹಿಂಜರಿಯುವ ಅದೆಷ್ಟೋ ಗೃಹಣಿಯರು ಬ್ಯಾಗ್ ಪ್ಯಾಕ್ ಮಾಡಿತಮ್ಮ ಕನಸಿಗೆ ರೆಕ್ಕೆ ನೀಡಿದ ಶಕ್ತಿ ಯೋಜನೆಯ ಕೃಪೆಯಿಂದ ರಾಜ್ಯಾದ್ಯಂತ ಸಂಚಾರ ಮಾಡಿದಂತಾಯಿತು ಎಂದು ಹರ್ಷ ವ್ಯಕ್ತ ಪಡಿಸಿದ ಮಹಿಳಾಮಣಿಗಳ ನುಡಿ ಮತ್ತೊಂದೆಡೆ. ಮುಪ್ಪಿನಲ್ಲಿ ಇಷ್ಟ ದೇವರದರ್ಶನದಮಹದಾಸೆಹೊಂದಿರುವ ಹಿರಿಯ ಜೀವಿಗಳು ಈ ಉಚಿತ ಬಸ್ ಪ್ರಯಾಣದಿಂದ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ ಇಷ್ಟ ದೇವರ ದರ್ಶನ ಪಡೆದು ಪಾವನರಾದೇವು ಎಂದವರು ಇನ್ನೊಂದೆಡೆ ಹೀಗೆಶಕ್ತಿಯೋಜನೆಒಂದೇ ಇದ್ದರೂ ಇದರ ಫಲಾನುಭವಿಗಳಾದ ಮಹಿಳಾಮಣಿಗಳ ಧನ್ಯತಾ ಭಾವ ಅನೇಕ.
ಇನ್ನು ಕೆಲ ಮಹಿಳೆಯರು ಉಚಿತ ಪ್ರಯಾಣ ಯೋಜನೆಯಾದ ಈ ಶಕ್ತಿ ಯೋಜನೆಯನ್ನು ಕೇವಲ ಮನೆಯಿಂದ ಹೊರಗಡೆ ಸಂಚಾರ ಮಾಡಲು ಮಾತ್ರ ಉಪಯೋಗಿಸದೇ ಸಿಕ್ಕಿರುವ ಅವಕಾಶದಲ್ಲಿಯೇ ತಮ್ಮ ವ್ಯಾಪಾರವನ್ನು ಏಕೆ ವೃದ್ಧಿಸಿಕೊಳ್ಳಬಾರದೆಂದು ಮನೆಯಲ್ಲಿ ತಯಾರಿಸಿ ಮಾರಾಟ ಮಾಡುತ್ತಿದ್ದ ಹಪ್ಪಳ, ಉಪ್ಪಿನಕಾಯಿ, ರೋಟಿ, ಹೋಳಿಗೆಗಳ ಹೀಗೆ ಅನೇಕ ಆಹಾರ ಪದಾರ್ಥಗಳನ್ನು ಹಳ್ಳಿಯಿಂದ ನಗರಗಳಿಗೆ ಕೊಂಡೊಯ್ದು ಮಾರಾಟ ಮಾಡಿ ತಮ್ಮ ಉತ್ಪನ್ನದ ಹೆಸರು ಪ್ರಖ್ಯಾತಿ ಮಾಡುವುದರೊಂದಿಗೆ ತಮ್ಮ ಆರ್ಥಿಕ ಜೀವನಮಟ್ಟವನ್ನು ಸುಧಾ-ರಿಸಿಕೊಂಡು ಸ್ವಾವಲಂಬನೆ ಜೀವನಕ್ಕೆ ಮಾದರಿಯಾಗಿ ಬದುಕುತ್ತಿದ್ದಾರೆ. ಆದರೆ ದುರದುಷ್ಟಕರ ಎಂದರೆ ಶಕ್ತಿ ಯೋಜನೆಯ ದುರುಪಯೋಗ ಪಡೆದುಕೊಳ್ಳುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅದೆಷ್ಟೊ ಹಾಸ್ಯಾತ್ಮಕವಾಗಿತೊರಿಸುವ ವಿಡಿಯೋ ಶಾಟ್ಸ್‌ಗಳು ಸ್ಕ್ರೋಲ್ ಮಾಡಿದಾಗ ಸೀಗುವಷ್ಟು ಯೋಜನೆಯಿಂದ ಸದುಪಯೋಗ ಪಡಿಸಿಕೊಂಡು ಜೀವನ ರೂಪಿಸಿಕೊಳ್ಳುತ್ತಿರುವುದರ ಬಗ್ಗೆ ಒಂದು ವಿಡಿಯೋ ಶಾಟ್ಸ್ ಗಳು ಸಾಮಾಜಿಕ ಜಾಲತಾಣಗಳಲ್ಲಿ ಕಾಣಸಿಗುವುದು ತುಂಬ ಕಡಿಮೆವಿರುವುದು ಬೇಸರದ ಸಂಗತಿ.

**– ವಿದ್ಯಾಶ್ರೀ ಹೊಸಮನಿ**
**ಪ್ರಶಿಕ್ಷಣಾರ್ಥಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಜಯಪಯರ**

## ರೈತ ಸುರಕ್ಷಾ–ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಬೆಳೆ ವಿಮೆ ನೋಂದಣಿ ಆರಂಭ

**ಬಾಗಲಕೋಟ :** ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ–ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿಯಲ್ಲಿ ರೈತರು ಅಧಿಸೂಚಿತ ಬೆಳೆಗಳಿಗೆ ನೋಂದಣಿ ಮಾಡಿಸಬೇಕಾಗಿದೆ. ಬೆಳೆಸಾಲ ಪಡೆದ ರೈತರಿಗೆ ಯೋಜನೆ ಕಡ್ಡಾಯವಾಗಿದ್ದು, ಭಾಗವಹಿಸದಿರುವ ರೈತರು ಅಂತಿಮ ದಿನಾಂಕಕ್ಕಿಂತ 7 ದಿನ ಮೊದಲು ಬ್ಯಾಂಕಗೆ ಲಿಖಿತ ಪತ್ರ ಕೊಡಬೇಕು. ಬೆಳೆಸಾಲವಿಲ್ಲದ ರೈತರಿಗೆ ಯೋಜನೆ ಐಚ್ಛಿಕ, ಜಿಲ್ಲೆಗೆ ಯುನಿವರ್ಸಲ್ ಸೊಂಪೊ ಜಿ.ಐ.ಸಿ. ವಿಮಾ ಕಂಪನಿ ಆಯ್ಕೆಯಾಗಿದೆ. ಆಹಾರ ಬೆಳೆಗಳಿಗೆ ಶೇಕಡಾ 2 ಮತ್ತು ವಾಣಿಜ್ಯ ಬೆಳೆಗಳಿಗೆ ಶೇಕಡಾ 5 ರಷ್ಟು ಕಂತು ಪಾವತಿ ಅನಿವಾರ್ಯ, ಬೆಳೆ ನಷ್ಟದ ಮಾಹಿತಿ 72 ಗಂಟೆಯೊಳಗೆ ನೀಡಬೇಕು. ಕಟಾವಿನ ನಂತರ 14 ದಿನಗಳಲ್ಲಿ ನಷ್ಟವಾದರೂ ಸಹ ಪರಿಹಾರ ಸಿಗಲಿದೆ.
ನೋಂದಣಿಗೆ ಪ್ರೂಟ್ಸ್ ಎಫ್‌ಐಡಿ ಕಡ್ಡಾಯ. ಹೆಚ್ಚಿನ ಮಾಹಿತಿಗಾಗಿ www.samrakshane.karnataka,gov.in ಹಾಗೂ ಸಮೀಪದ ರೈತ ಸಂಪರ್ಕ ಕೇಂದ್ರ/ತಾಲೂಕ ಕೃಷಿ / ತೋಟಗಾರಿಕೆ ಇಲಾಖೆ ಹಾಗೂ ಬೆಳೆ ವಿಮೆ ಸಂಸ್ಥೆ ಕಛೇರಿಗೆ ಸಂಪರ್ಕಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಕಾರಿ ಸಂಘದಿಂದ ಬಡವರ ಆರ್ಥಿಕ ಪ್ರಗತಿ: ಶೀಲವಂತ




**ಗುಳೇದಗುಡ್ಡ :** ನಮ್ಮಲ್ಲಿರುವ ಸಾಮಥ–ರ್ಯ, ಬುದ್ಧಿವಂತಿಕೆ ಉಪಯೋಗಿಸಿಕೊಂಡು ಸ್ವಂತಉದ್ದಿಮೆಸ್ಥಾಪಿಸಿನಡೆದರೆಜೀವನದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆಯಬಹುದು. ಇದ–ರಿಂದ ಕುಟುಂಬದೊಂದಿಗೆ ಇತರರಿಗೂ ಉದ್ಯೋಗ ನೀಡಲು ಸಾಧ್ಯವಾಗುತ್ತದೆ. ಸ್ವಾವಲಂಬಿ ಬದುಕು ನಡೆಸಲು ಪ್ರತಿಯೊಬ್ಬ ಯುವಕರು ಮುಂದಾಗಬೇಕು. ಸಹಕಾರಿ ಸಂಘದಿಂದ ಬಡವರ ಆರ್ಥಿಕ ಪ್ರಗತಿ ಸಾಧ್ಯವೆಂದು ಮಾಜಿ ಶಾಸಕ, ಲಕ್ಷ್ಮೀ ಸಹಕಾರಿ ಬ್ಯಾಂಕ್ ಅಧ್ಯಕ್ಷ ರಾಜಶೇಖರ ಶೀಲವಂತ ಹೇಳಿದರು.
ಅವರು ಪಟ್ಟಣದಲ್ಲಿ ನೂತನವಾಗಿ ಪ್ರಾರಂಭಗೊಂಡ ವಿಜಯೇಂದ್ರ ಪತ್ತಿನ ಸಹಕಾರಿ ಸಂಘದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲ–ರಿಗೂ ಸರ್ಕಾರಿ ನೌಕರಿಯೇ ಬೇಕೆನ್ನುವ ಮನೋಭಾವನೆ ಸರಿಯಲ್ಲ. ಸ್ವಂತ ಉದ್ಯೋಗ ಹುಟ್ಟು ಹಾಕಬೇಕು. ಆರ್ಥಿಕವಾಗಿ ಸಬಲತೆ ಸಾಧಿಸಬೇಕು. ಆ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸಹಕಾರಿ ಸಂಘ ಕಟ್ಟುವುದು ಸುಲಭ.ಆದರೆಅದನ್ನುಮುನ್ನೆಡೆಸಿಕೊಂಡು ಹೋಗುವುದು ಸವಾಲಿನ ಮಾತಾಗಿದೆ ಎಂದರು.
ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ ಮಾತನಾಡಿ, ಸಹಕಾರಿ ಸಂಘದಿಂದಬಡವರಿಗೆ,ಬೀದಿವ್ಯಾಪಾರಸ್ಥ–ರಿಗೆಅನುಕೂಲವಾಗಲಿದೆ.ಸಾಲಪಡೆದವರು ಅದನ್ನು ಸದುಪಯೋಗ ಪಡಿಸಿಕೊಂಡು ಸಕಾಲದಲ್ಲಿ ಮರುಪಾವತಿಸಿ ಸಂಘದ ಬೆಳೆವಣಿಗೆಗೆ ಕೈಜೋಡಿಸಬೇಕೆಂದರು.
ಸಹಕಾರಿ ಸಂಘದ ಅಪರ ನಿಬಂಧಕ ಎಚ್.ವೈ.ಗದ್ದನಕೇರಿ ಮಾತನಾಡಿ, ಹಣ–ಕಾಸಿನ ಸಂಸ್ಥೆಯಲ್ಲಿ ಪ್ರಾಮಾಣಿಕತೆ ಇರಲಿ. ಸಹಕಾರಿ ಸಂಘದಿಂದ ಬಡವರ ಆರ್ಥಿಕ ಸಂಕಷ್ಟ ದೂರವಾಗಲಿದೆ. ಉಳಿತಾಯ ಮನೋಭಾವನೆ ಎಲ್ಲರಲ್ಲಿ ಬೆಳೆಯಲಿ. ಸಂಘ ಎತ್ತರದ ಪ್ರಗತಿ ಸಾಧಿಸಲಿ ಎಂದರು.
ಮರಡಿಮಠದ ಶ್ರೀಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವಿಜಯೇಂದ್ರ ಪಟ್ಟಿನ ಸಹಕಾರಿ ಸಂಘದ ಅಧ್ಯಕ್ಷ ಅಕ್ಷಯ ಅಶೋಕ ನಾಯನೇಗಲಿ ಅಧ್ಯಕ್ಷತೆ ವಹಿದ್ದರು.
ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಸಂಘದ ಉಪಾಧ್ಯಕ್ಷ ಬಾಲಚಂದ್ರ ಹುನಗುಂದ, ನಿರ್ದೇಶಕರಾದ ಮಹಾಂತೇಶ ಪಟ್ಟಣಶೆಟ್ಟಿ, ಪ್ರಶಾಂತ ಕರಡಿಗುಡ್ಡ, ನಾರಾಯಣ ನೇಮದಿ, ಸೋಮಶೇಖರ ಸೋಮನಾಳ, ಅನೀಲಕುಮಾರ ನೇಮದಿ, ಶೋಭಾ ರಾಂಪೂರ, ಗಾಯಿತ್ರಿ ಸೋಲ್ಲಾಪೂರ, ಸುಭಾಸ ಪವಾರ, ಮಹಾಲಿಂಗ ದಡಿ, ಮಾರುತಿ ಲಮಾಣಿ, ಪರಸಪ್ಪ ಆಸಂಗಿ, ಸುಭಾಸ ಗೊಬ್ಬಿ, ದೀಪಕ ನೇಮದಿ, ಮಲ್ಲಿಕಾರ್ಜುನ ಹುನಗುಂದ, ಪ್ರದೀಪ ನಾಯನೇಗಲಿ, ಅಶೋಕ ನಾಯನೇಗಲಿ ಇತರರು ಇದ್ದರು.

## ಹೊರಗುತ್ತಿಗೆ ನೌಕರಿಗೆ ಅವಮಾನ: ನಿಲಯ ಪಾಲಕರ ಅಮಾನತ್ತುಗೆ ಆಗ್ರಹ



**ಬಾಗಲಕೋಟೆ :** ಹೊರಗುತ್ತಿಗೆ ನೌಕರಿಗೆ ಅವಮಾನ: ನಿಲಯ ಪಾಲಕರ ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಲಾಯಿತು. ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ, ಬೀಳಗಿಯಲ್ಲಿ (ಬಿ.ಸಿ.ಡಬ್ಲ್ಯೂ.ಡಿ–1522) ಕಳೆದ 20 ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ಶ್ರೀಮತಿ ಭಾರತಿ ಹು.ಚಲವಾದಿ ಅವರಿಗೆ ನಿಲಯ ಪಾಲಕರಾದ ಶ್ರೀಮತಿ ಶಿಲ್ಪಾ ಯಡಹಳ್ಳಿ ಅವರು ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ, ಜೊತೆಗೆ ಚಪ್ಪಲಿಯನ್ನು ಅವರ ಮೇಲೆ ಎಸಿದಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಕೂಡಲೇ ಶಿಲ್ಪಾ ಯಡಹಳ್ಳಿ ಅವರನ್ನು ಕೂಡಲೇ ಸೇವೆಯಿಂದ ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ಸರಕಾರದ ನಿಯಮದಂತೆ ಸೀನಿಯರ್ ಸಿಬ್ಬಂದಿಗೆ ಆದ್ಯತೆ ನೀಡಬೇಕಾದರೂ, ಶಿಲ್ಪಾ ಯಡಹಳ್ಳಿ ಅವರು ತಮಗೆ ಬೇಕಾದವರನ್ನು ಕೆಲಸಕ್ಕೆ ತಗೆದುಕೊಳ್ಳುತ್ತಿದ್ದಾರೆ. ಜಾತಿ ನಿಂದನೆಯ ಮೂಲಕ ಮಾನಸಿಕ ಕಿರುಕುಳ ನೀಡಿದ್ದಾರೆ. ಇದು ದಂಡನೀಯ ಅಪರಾಧವಾಗಿದ್ದು, ಪ್ರಕರಣದ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಿ, ಭಾರತಿ ಹು.ಚಲವಾದಿ ಅವರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು. ಮನವಿಗೆ ಸ್ಪಂದನೆ ದೊರೆಯದಿದ್ದರೆ ಜಿಲ್ಲಾಮಟ್ಟದ ಅಹೋರಾತ್ರಿ ಧರಣಿ ಹಾಗೂ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಸಂಘದ ಪದಾಧಿಕಾರಿಗಳು ಎಚ್ಚರಿಸಿದರು.

## ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ ಜೋಶಿಯವರಿಗೆ ಸಂಪುಟ ದರ್ಜೆಯ ಸ್ಥಾನಮಾನ ಮುಂದುವರಿಸಿ





**ವಿಜಯಪುರ :** ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿಯವರ ಕನ್ನಡ ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಪರ ಚಿಂತನೆಯ ಹಿನ್ನೆಲೆಯಲ್ಲಿ ಹಿಂದಿನ ಸರಕಾರ ರಾಜ್ಯ ಸಚಿವ ಸಂಪುಟ ದರ್ಜೆಗೆ ಸಮನಾದ ಸ್ಥಾನಮಾನವನ್ನು ನೀಡಿದ್ದು, ಇಂದಿನ ಸರಕಾರ ರಾಜ್ಯ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ರದ್ದುಗೊಳಿಸುವ ಆದೇಶ ನೀಡಿ ರಾಜ್ಯ ಸಚಿವ ಸಂಪುಟದ ಸ್ಥಾನಮಾನ ಅನ್ವಯಿಸುವ ಸೌಲಭ್ಯಗಳನ್ನು ಹಿಂಪಡೆಯಲಾಗಿದ್ದು ಅತ್ಯಂತ ಖಂಡನೀಯ ಹಾಗೂ ಕನ್ನಡ ಭಾಷೆಗೆ ಹಾಗೂ ಕನ್ನಡಿಗರಿಗೆ ಮಾಡಿದ ಘೋರ ಅವಮಾನ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಟೀಕಿಸಿದರು.
ಗುರುವಾರ ಬೆಳಿಗ್ಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.
ನಾಡೋಜ ಡಾ. ಮಹೇಶ ಜೋಶಿಯವರು ಕಾರ್ಯಕಾರಿಣಿಸಭೆಗಳನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಡೆಸುತ್ತಿದ್ದಾರೆ. 28 ಜಿಲ್ಲೆಗಳ ಕಸಾಪ ಅಧ್ಯಕ್ಷರುಗಳು ಡಾ. ಮಹೇಶ ಜೋಶಿಯವರ ಮತ್ತು ಜಿಲ್ಲಾಧ್ಯಕ್ಷರುಗಳ ಸಮನ್ವಯತೆಯಿಂದ ಕಾರ್ಯಗಳನ್ನು ಮಾಡುತ್ತ ಬಂದಿದ್ದಾರೆ. ಯಾವತ್ತೂ ಡಾ. ಜೋಶಿಯವರು ಸರ್ವಾಧಿಕಾರಿಯಂತೆ ವರ್ತಿಸಿಲ್ಲ. ಅತೃಪ್ತರು ವಿನಾಕಾರಣ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದರು.
ಬಳ್ಳಾರಿಯಲ್ಲಿ ಜರುಗುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 40ಕೋಟಿ ಅನುದಾನ ಬೇಡ. 10ಕೋಟಿಗೆ ಸೀಮಿತಗೊಳಿಸಿ ಎಂದು ಕೆಲವರು ಸರಕಾರಕ್ಕೆ ಪತ್ರ ಬರೆದು ಪವಿತ್ರ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವಮಾನ ಎಸಗುತ್ತಿದ್ದಾರೆ ಎಂದು ಹೇಳಿದರು.
ಸಾಹಿತಿ ಪ್ರೊ ಎಸ್.ಜಿ ಸಿದ್ದರಾಮಯ್ಯ ಮತ್ತು ಅವರ ಬಳಗ ಡಾ. ಮಹೇಶ ಜೋಶಿಯವರನ್ನು ವಜಾ ಮಾಡಲು ಆಗ್ರಹಿಸುವ ಸಾಹಿತಿ ಸಿದ್ದರಾಮಯ್ಯನವ–ರಿಗೆ ಮತಿಭ್ರಮಣೆಯಾಗಿದೆ. ಡಾ. ಜೋಶಿಯವರು ಹಾಗೂ ಎಲ್ಲ ಜಿಲ್ಲೆಯ ಕಸಾಪ ಅಧ್ಯಕ್ಷರುಗಳು ಚುನಾಯಿತರಾಗಿ ಆಯ್ಕೆಯಾಗಿರುವುದು ಸಾಹಿತಿ ಎಸ್.ಜಿ ಸಿದ್ದರಾಮಯ್ಯ ಮರೆತಂತಿದೆ ಎಂದರು.
28 ಜಿಲ್ಲಾಧ್ಯಕ್ಷರು ಕನ್ನಡ ನಾಡು–ನುಡಿಗಾಗಿ ಹಗಲಿರುಳು ಅಹರ್ನಿಶಿ ದುಡಿಯುತ್ತಿದ್ದಾರೆ. ಸಾಹಿತಿ ಪ್ರೊ ಎಸ್.ಜಿ. ಸಿದ್ದರಾಮಯ್ಯ ಜಿಲ್ಲಾಧ್ಯಕ್ಷರುಗಳ ಬಗ್ಗೆ ಹಗುರವಾಗಿ ಮಾತನಾಡಿದ್ದು, ಅವರ ಅವಿವೇಕತನವನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದರು.
ಹಾವೇರಿಯಲ್ಲಿ ಜರುಗಿದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರಕಾರ 25ಕೋಟಿ ರೂಪಾಯಿ ಅನುದಾನ ನೀಡಿದ್ದು, ಮಂಡ್ಯದಲ್ಲಿ ಜರುಗಿದ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 30ಕೋಟಿ ರೂಪಾಯಿಗಳನ್ನು ಸರಕಾರ ಬಿಡುಗಡೆ ಮಾಡಿದ್ದು, ಮಂಡ್ಯದಲ್ಲಿ ಸ್ಥಳೀಯರಿಂದ 10ಕೋಟಿ ರೂಪಾಯಿ ಹಣವನ್ನು ಸಂಗ್ರಹಿಸಿ ಸಮ್ಮೇಳನ ಯಶಸ್ವಿಯಾಗಿದೆ.
ಇದೀಗ ಬಳ್ಳಾರಿಯಲ್ಲಿ ಜರುಗಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರಕಾರ ಕನಿಷ್ಠ 40ಕೋಟಿ ಹಣವನ್ನು ಬಿಡುಗಡೆ ಮಾಡುವಂತೆ ರಾಜ್ಯಾಧ್ಯಕ್ಷರು ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆದರೆ ಸಮ್ಮೇಳನದ ದಿಕ್ಕು ತಪ್ಪಿಸಿ ಅಕ್ಷರ ಜಾತ್ರೆಯನ್ನು ಹಾಳು ಮಾಡಲು ಸಾಹಿತಿ ಪ್ರೊ. ಎಸ್.ಜಿ ಸಿದ್ದರಾಮಯ್ಯ ಹಾಗೂ ಅವರ ಬಳಗ ಸಂಚು ರೂಪಿಸುತ್ತಿದ್ದಾರೆ. ಇದನ್ನು ಸರಕಾರ ಪರಿಗಣಿಸಬಾರದು ಎಂದರು
ಕನ್ನಡದ ಕೆಲಸ ಕಾರ್ಯಗಳನ್ನು ಮಾಡಲು ಅದರಲ್ಲೂ ವಿಶೇಷವಾಗಿ ಕನ್ನಡ ನಾಡು–ನುಡಿ, ನೆಲ–ಜಲ, ಹಾಗೂ ಭಾಷೆಯ ಉಳಿವಿಗಾಗಿ ಹಿಂದಿನ ಸರಕಾರ ಪೂರ್ಣ ಅವಧಿಗೆ ನೀಡಿದ್ದ ರಾಜ್ಯ ಸಂಪುಟ ದರ್ಜೆಯ ಸ್ಥಾನಮಾನಗಳನ್ನು ಇಂದಿನ ಸರಕಾರವೂ ಸಹ ಮುಂದುವರಿಸಬೇಕು, ಪೂರ್ವಾಗ್ರಹ ಪೀಡಿತ ಮನೋಭಾವನೆಯಿಂದ ಸಾಹಿತ್ಯ ಪರಿಷತ್ತಿನ ಕಾರ್ಯ ಕಲಾಪಗಳಿಗೆ ತೊಂದರೆ ನೀಡಬಾರದು ಎಂದು ತಿಳಿಸಿದರು.
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಈ ಸಂಸ್ಥೆಯ ಹಿರಿಮೆ–ಗರಿಮೆ, ಘನತೆ–ಗೌರವಗಳನ್ನು ಕಾಪಾಡಲು ಕರ್ನಾಟಕ ಸರಕಾರ ಮರಳಿ ರಾಜ್ಯಾಧ್ಯಕ್ಷರಿಗೆ ಅದೇ ಸ್ಥಾನಮಾನದಲ್ಲಿ ಮುಂದುವರಿಸಬೇಕು ಎಂದು ನುಡಿದರು.
ಮೂರು ಬಾರಿ ಬೈಲಾ ತಿದ್ದುಪಡಿ ಮಾಡಿರುವ ಕುರಿತು ಆಕ್ಷೇಪಣೆ ಎತ್ತಿದ ಪ್ರೊ. ಎಸ್. ಜಿ ಸಿದ್ಧರಾಮಯ್ಯ ಯಾರು? ಬೈಲಾ ತಿದ್ದುಪಡಿಗಳಿಗೆ 28 ಜಿಲ್ಲಾಧ್ಯಕ್ಷರುಗಳು ಬೆಂಬಲಿಸಿದ್ದಾರೆ. ಅಷ್ಟೇ ಅಲ್ಲದೆ ತಿದ್ದುಪಡಿಗಳನ್ನು ವಿಶ್ರಾಂತ ನ್ಯಾಯಮೂರ್ತಿ ಅರಳಿ ನಾಗರಾಜರವರ ಅಧ್ಯಕ್ಷತೆಯಲ್ಲಿ ಜರುಗಿದ್ದನ್ನು, ಅತೃಪ್ತ ಸಾಹಿತಿಗಳು ಮನಗಾಣಬೇಕು ಎಂದರು.
ಸರಕಾರ ಸಮ್ಮೇಳನಗಳಿಗೆ ಅನುದಾನ ನೀಡುವುದು ಆಯಾ ಜಿಲ್ಲೆಗಳ ಜಿಲ್ಲಾಧಿಕಾ–ರಿಗಳಿಗೆ. ಹೀಗಾಗಿ ಪರಿಷತ್ತು ಈ ಹಣದಲ್ಲಿ ಅವ್ಯವಹಾರ ಮಾಡುತ್ತಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿದರು.

# ಹಣ ಎಷ್ಟಿದ್ದರೇನಂತೆ ಋಣ ಇದ್ದಷ್ಟೇ ಜೀವನ



ಸ್ನೇಹಿತರೆ ನಾವು ಎಷ್ಟೆಲ್ಲಾ ಯೋಚನೆ ಮಾಡ್ತಾ ಹೋಗ್ತಿವಿ. ಪ್ರತಿದಿನ ಆದ–ರೆ ನಿನ್ನೆ ಏನು ಮಾಡಿದ್ದೆ, ಇವತ್ತೇನು ಮಾಡಬೇಕು, ನಾಳೆ ಏನು ಮಾಡಬಹುದು ಎಂಬ ಸಾಕಷ್ಟು ಆಲೋಚನೆಗಳು ಪ್ರತಿ ಕ್ಷಣ ಕ್ಷಣಕ್ಕೂ ಯೋಜನೆಗಳನ್ನು ರೂಪಿಸಿಕೊಳ್ಳುತ್ತಾ ಹೋಗುತ್ತೇವೆ. ನಾನು ಅರ್ಥ ಮಾಡಿಕೊಂಡಿರುವ ಹಾಗೆ ನಮ್ಮ ಮನಸ್ಸು ನಾಳೆ ಅನ್ನುವ ಮಾಯೆಯ ಹಿಂದೆ ಓಡುತ್ತಿದೆ.
ಕನ್ನಡದ ಮೇರುಕವಿ ರಾಷ್ಟ್ರಕವಿಗಳಾದಂತಹ ಶ್ರೀ ಜಿ .ಎಸ್ ಶಿವರುದ್ರಪ್ಪನವರು ಹೇಳಿರುವ ಹಾಗೆ ಕಾಣದ ಕಡಲಿಗೆ ಹಂಬಲಿಸಿದೆ ಮನ ಇದರ ಭಾವಾರ್ಥ ಓದುಗರ ಅವರವರ ಅಭಿಪ್ರಾಯಕ್ಕೆ ತಕ್ಕಂತೆ ಇರಬಹುದೇನೋ? ಈ ಕವಿತೆಯ ಪದಗಳೇ ಈ ನನ್ನ ಲೇಖನ ಬರೆಯುವ ತುಡಿತವನ್ನು ಹೆಚ್ಚಿಸಿದೆ.
ನಾಳೆ ಬಗ್ಗೆ ನಾನು ಮಾತನಾಡುವುದಿಲ್ಲ. ನಾಳೆಯ ಬಗ್ಗೆ ಹೇಳುವಷ್ಟು ದೊಡ್ಡ ವ್ಯಕ್ತಿಯೂ ನಾನಲ್ಲ . ನಮ್ಮ ಹಿರಿಯರು ಹೇಳಿರುವ ಹಾಗೆ ಜೀವನ ಎನ್ನುವುದು ನೀರಿನ ಮೇಲಿನ ಗುಳ್ಳೆಯ ತರ . ಈ ಮಾತು ಬಹಳಷ್ಟು ಸಂದರ್ಭಗಳಲ್ಲಿ ನಮಗೆ ಅರಿವಿಗೆ ಬಂದಿರಬಹುದು. ನೋಡಿ ಮೊನ್ನೆ 17 ವರ್ಷಗಳವರೆಗೆ ಒಂದು ಕಪ್ಪುಗಾಗಿ ಕಾದು ಕುಳಿತಿದ್ದೇವು. ಅದರ ತಪಸ್ಸಿನ ಫಲವೇನು ಎಂಬಂತೆ 18ನೇ ವರ್ಷ ಪ್ರಶಸ್ತಿ ಪಡೆದ 10 ಗಂಟೆ ಒಳಗೆ ಎಂತಹ ಅನಾಹುತ ನಡೆದುಹೋಯಿತು. ಇನ್ನೂ ಬೆಳೆದು ಫಲ ಕೊಡಬೇಕಾದ ಸಸಿಗಳು (11 ಮಕ್ಕಳು) ಫಲ ಕೊಡುವ ಮೊದಲೇ ಬಾಡಿ ಹೋದವು. ಸಂತೋಷಪಡುವ ಸಮಯದಲ್ಲೇ ದುಃಖದ ಮಡುವಿನಿಂದ ಆ ದಿನಗಳನ್ನು ನೂಕುವಂತಾಯಿತು.
ಖುಷಿಯೊಳಗಿನ ನೋವನ್ನು ಮರೆಯುವುದಕ್ಕಿಂತ ಮುಂಚೆಯೇ ಮತ್ತೊಂದು ದೊಡ್ಡ ಆಘಾತ . ಮೊನ್ನೆ ಮಧ್ಯಾಹ್ನ ಊಟ ಮಾಡುವ ಸಮಯದಲ್ಲಿ ಸುಮ್ನೆ ಹಾಗೆ ಮೊಬೈಲ್ ತೆಗೆದುಕೊಂಡು ನ್ಯೂಸ್ ಕೇಳ್ತಾ ಇದ್ದೆ.ಆ ಸಂದರ್ಭದಲ್ಲಿ ಅಹಮದಾಬಾದ ವಿಮಾನ ದುರಂತದ ವಿಷಯ ಕೇಳಿ ನಿಜವಾಗಿಯೂ ನನ್ನ ಎದೆ ಝಲ್ ಎಂದೆನಿಸಿತು. ನೂರಾರು ಕನಸುಗಳನ್ನು ಹೊತ್ತುಕೊಂಡು ಸಾಗುತ್ತಿದ್ದ ನೂರಾರು ಜನರು ಕೆಲವೇ ಸೆಕೆಂಡುಗಳ ಅಂತರದಲ್ಲಿ ಕನಸುಗಳೊಂದಿಗೆ ಅವರು ಸಹ ಮರೆಯಾಗಿದ್ದನ್ನು ಕಂಡು ನನ್ನ ಕಣ್ಣುಗಳು ತೇವಗೊಂಡವು. ಒಬ್ಬ ನ್ಯೂಸ್ ನಿರೂಪಕ ಈ ವಿಷಯವನ್ನು ಹೇಳುವಾಗ ತನ್ನ ಭಾರವಾದ ಹೃದಯದಿಂದ ಕೆಲವು ವಿಷಯಗಳನ್ನು ವ್ಯಕ್ತಪಡಿಸುತ್ತಾ ಇದ್ದ. ಅದರಲ್ಲಂತೂ ಕೆಲವು ವ್ಯಕ್ತಿಗಳ ಘಟನೆಗಳು ನನ್ನ ಮನ ಕಲಕುವಂತೆ ಮಾಡಿತು. ಇನ್ನೇನು ಕುಟುಂಬ ಸಮೇತ ಲಂಡನ್ನಲ್ಲಿ ವಾಸವಾಗುವ ಕನಸು ಕಂಡಿದ್ದ ವೈದ್ಯರ ಕುಟುಂಬ ದುರಂತ ಅಂತ್ಯ ಕಂಡಿತು. ನಗುಮುಖದ ಮಕ್ಕಳ ಭಾವಚಿತ್ರದೊಂದಿಗೆ ಸೆಲ್ಫಿ ಕ್ಲಿಕ್ಕಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡು ನನ್ನ ಪುಣ್ಯಭೂಮಿ ಭಾರತ ಬಿಟ್ಟು ಹೋಗುತ್ತಿದ್ದೇನೆ ಎನ್ನುವ ಮಾತೇ ಅಂತಿಮವಾಯಿತಲ್ಲ. ಆ ನಗು ಮುಖದ ಸುಂದರ ಮೂವರು ಮಕ್ಕಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿರುವುದನ್ನು ಕೇಳಿ ಕಣ್ಣಿನಿಂದ ನೀರಿನ ಹನಿಯೊಂದು ಅನುಮತಿ ಇಲ್ಲದೆ ಕೆಳಗೆ ಬಿತ್ತು. ಇದರಂತೆ ತನ್ನ ಅರ್ಧಾಂಗಿ ತೀರಿಹೋಗುವ ಮುನ್ನ ಕೊಟ್ಟ ಮಾತಿನಂತೆ ಚಿತಾ ಬಸ್ಮವನ್ನು ಲಂಡನ್ನಿನ ನದಿಯಲ್ಲಿ ಬಿಡಬೇಕೆಂದು ಹೊರಟಿದ್ದ ವ್ಯಕ್ತಿ ಕೂಡ ಈ ದುರಂತದಲ್ಲಿ ಅಂತ್ಯಗೊಂಡ.ಇನ್ನೂ ವಿಮಾನದ ಒಳಗಿರುವ ವ್ಯಕ್ತಿಗಳ ಕಥೆ ಒಂದು ತರವಾದರೆ , ವಿಮಾನದ ಪೈಲೆಟ್ ಕಥೆ ಇನ್ನೊಂದು ತರ . ವಿಮಾನದ ಪೈಲೆಟ್ ಮೇ ಡೇ ಮೇ ಡೇ ಎಂದು ವಿಮಾನ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸುವಾಗ ಅವರ ಕಣ್ಣ ಮುಂದೆ ಅವರ ಹೆಂಡತಿ ಮಕ್ಕಳು ಅದೆಷ್ಟೋ ಕನಸುಗಳು ಬಂದು ಹೋಗಿರಬಹುದಲ್ಲವೇ .
ಸ್ನೇಹಿತರೆ ಒಮ್ಮೆ ಆಲೋಚಿಸಿ ಜೀವನವೇ ಹೀಗೆ ಅಲ್ಲವೇ. ನಾವು ಅಂದುಕೊಳ್ಳುವುದೇ ಒಂದು ಆದರೆ ನಡೆಯೋದೆ ಇನ್ನೊಂದು. ಸಾಧ್ಯವಾದಷ್ಟು ನಾವು ಇನ್ನೊಬ್ಬ–ರಿಗೆ ಒಳ್ಳೆಯದನ್ನೇ ಮಾಡೋಣ. ತಂದೆ ತಾಯಿಯರನ್ನ ವೃದ್ಧಾಶ್ರಮಕ್ಕೆ ಸೇರಿಸಿ ತಂದೆ ತಾಯಿಯರ ದಿನಗಳ ಶುಭಾಶಯಗಳನ್ನು ತಮ್ಮ ಮೊಬೈಲ್ ನಲ್ಲಿ ಸ್ಟೇಟಸ್ ಇಡುವಂತಹ ಜನ ಇಂದು ಅವಶ್ಯಕತೆ ಇಲ್ಲ. ತಂದೆ ತಾಯಿ ಇರೋವರೆಗೂ ಅವರ ಕಣ್ಣಲ್ಲಿ ನೀರು ಬರದಂತೆ ನೋಡಿಕೊಂಡರೆ ಸಾಕು. ನಾವು ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡದಿದ್ದರೂ ಪರವಾಗಿಲ್ಲ. ನಮ್ಮಿಂದ ಇನ್ನೊಬ್ಬರಿಗೆ ಕೆಟ್ಟದ್ದಂತೂ ಮಾಡಬಾರದೆನ್ನುವ ಭಾವನೆ ನಮ್ಮದಾಗಿರಲಿ. ನಾಳೆ ಬಗ್ಗೆ ಚಿಂತೆ ಬೇಡ ಇಂದು ಈ ಕ್ಷಣವನ್ನು ಸಂತೋಷದಿಂದ ಅನುಭವಿಸೋಣ. ನಮ್ಮೊಂದಿಗೆ ಇರುವವರಿಗೆ ನೆಮ್ಮದಿಯಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಡೋಣ .



ಸ್ನೇಹಿತರೆ ಈ ಮೇಲಿನ ಘಟನೆಯ ವ್ಯಕ್ತಿಗಳ ಬಳಿಯೂ ಹಣವಿತ್ತು. ನಾಳೆಯ ಬಗ್ಗೆ ಆಲೋಚನೆಯೂ ಇತ್ತು ಆದರೆ ದೇವರ ಆಟ ಬೇರೆಯಾಗಿ–ತ್ತು. ಸಾಧ್ಯವಾದಷ್ಟು ಒಳ್ಳೆಯದನ್ನ ಬಯಸೋಣ. ನಿಮಗಿನ್ನೊಂದು ಉದಾಹರಣೆ ಹೇಳುವುದಾದರೆ ನಗುವಿನ ಒಡೆಯ ನಮ್ಮೆಲ್ಲರ ಹೃದಯದಲ್ಲಿ ಅಜರಾಮರವಾಗಿರುವಂತಹ ರಾಜ–ಕುಮಾರ ನಮ್ಮೆಲ್ಲರ ಪ್ರೀತಿಯ ಅಪ್ಪು ರಾಜ್ಯದ ಯಾವುದೇ ಮೂಲೆಗಾದರೂ ಹೋಗಿ ನೋಡಿ ಆ ಊರಿಗೆ ಅಥ–ವಾ ಆ ಹಳ್ಳಿಗೆ ಮೂಲ ಸೌಲಭ್ಯಗಳು ಇದಾವೋ ಇಲ್ವೋ ಗೊತ್ತಿರಲ್ಲ. ಆದರೆ ಅಲ್ಲಿ ಅಪ್ಪುವಿನ ಫೋಟೋ ಮಾತ್ರ ಇದ್ದೇ ಇರುತ್ತೆ ಇದೇ ಅಲ್ಲವೇ ಸಾಧನೆ ಅಂದರೆ. ಕನ್ನಡದ ಚಲನಚಿತ್ರದಲ್ಲಿ ಒಂದು ಮಾತಿದೆ ನಾವು ಸತ್ತ ಮೇಲೆ ಜನ ನಮ್ಮ ಹೆಸರನ್ನ ನೆನೆಸುವುದನ್ನು ಆ ದೇವರು ನೋಡಿ ಯಾಕಾದ್ರೂ ಈ ಮನುಷ್ಯನ ಜೀವ ತೆಗೆದೆ ಅಂತ ಬೇಜಾರ್ ಮಾಡ್ಕೋಬೇಕಂತೆ ಈ ರೀತಿಯಲ್ಲಿ ನಾವುಗಳು ಬದುಕಿ ಸಾಧಿಸಿ ಈ ನಾಲ್ಕು ದಿನದ ಯಾತ್ರೆಯನ್ನು ಮುಗಿಸೋಣ.

**"ಸೋಜಿಗವಂತೆ ಈ ಬದುಕು**
**ನೀನೊಮ್ಮೆ ಇಣುಕು**
**ಜೀವನವೇನೆಂದು ಹುಡುಕು**
**ಇಂದೇ ನಿನಗಿರುವ ಕೊನೆ ದಿನ**
**ಎನ್ನುವಂತೆ ಬದುಕಿ ಬಿಡು"**

ಕನ್ನಡ ಕವಿಯೊಬ್ಬರ ಮಾತುಗಳನ್ನು ನೆನೆಯುತ್ತಾ ಖುಷಿಯಾಗಿರೋಣ.... ಜೀವನವನ್ನು ಆನಂದಿಸುವುದರೊಂದಿಗೆ ಅನುಭವಿಸೋಣ.

***

**ಲೇಖಕರು :**
**ಮಹಾಂತೇಶ್ ಮೇಟಿ**
**ಶಿಕ್ಷಕರು**
**ಮೊಬೈಲ್ ಸಂಖ್ಯೆ 8971173342**

## ಗಡಿನಾಡು ಶಿಕ್ಷಣ ನಿರ್ದೇಶನಾಲಯ ರಚನೆ ಅಗತ್ಯ: ಬರಗೂರು ರಾಮಚಂದ್ರಪ್ಪ ಪ್ರತಿಪಾದನೆ

### ಭಾಷಾ ಚಳುವಳಿಗಳು ಬದುಕಿನ ಚಳುವಳಿಗಳಾಗಲಿ






**ಬೆಂಗಳೂರು :** ರಾಜ್ಯದ ಗಡಿ ಭಾಗ ಮತ್ತು ಹೊರರಾಜ್ಯಗಳಲ್ಲಿನ ಕನ್ನಡಿಗರಿಗೆ ಶಿಕ್ಷಣದ ಸವಲತ್ತುಗಳನ್ನು ಒದಗಿಸಲು ಗಡಿನಾಡು ಶಿಕ್ಷಣ ನಿರ್ದೇಶನಾಲಯ ರಚಿಸುವ ಅಗತ್ಯವಿದೆ ಎಂದು ಸಂಸ್ಕೃತಿ ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.
ಕನ್ನಡ ಭವನದ ನಯನ ಸಭಾಂಗಣದಲ್ಲಿ ಕರ್ನಾಟಕ ಸ್ವಾಭಿಮಾನಿ ವೇದಿಕೆ ಜೂನ್ 18 ರಂದು ಹಮ್ಮಿಕೊಂಡಿದ್ದ 'ಚಂಪಾ ಸಿರಿಗನ್ನಡ ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿರಿಯ ಕನ್ನಡಪರ ಹೋರಾಟಗಾರ ಬೆಳಗಾವಿಯ ಅಶೋಕ ಚಂದರಗಿ ಅವರಿಗೆ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ರಾಜ್ಯದ ಗಡಿ ಭಾಗದಲ್ಲಿ 52 ತಾಲೂಕುಗಳು ಮತ್ತು ಗಡಿಗೆ ಹೊಂದಿಕೊಂಡಂತೆ ಹೊರ ರಾಜ್ಯಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳಿದ್ದು ಅಲ್ಲಿನ ಕನ್ನಡಿಗ–ರಿಗೆ ಶಿಕ್ಷಣದ ಎಲ್ಲ ಸವಲತ್ತುಗಳು ಸಿಗುವಂತೆ ರಾಜ್ಯ ಸರ್ಕಾರ ಗಡಿನಾಡು ಶಿಕ್ಷಣ ನಿರ್ದೇಶನಾಲಯ ರಚಿಸಬೇಕೆಂದರು.
ಗಡಿನಾಡಿನಲ್ಲಿ ಶಿಕ್ಷಣ, ಕೈಗಾರಿಕೆ, ಆಥಿ9ಕತೆ ಸೇ–ರಿದಂತೆ ಅನೇಕ ಸಮಸ್ಯೆಗಳಿದ್ದು ಭೌಗೋಳಿಕ ಮತ್ತು ಭಾಷಾ ವಿವಾದ ನಡೆಯುತ್ತಿರುತ್ತದೆ. ಭೌಗೋಳಿಕ ವಿವಾದವನ್ನು ಭಾವನಾತ್ಮಕ ವಿವಾದವನ್ನಾಗಿಸುವ ಪ್ರಯತ್ನವನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಯಾವಾಗಲೂ ಮಾಡುತ್ತಿದ್ದಾರೆಂದ ಅವರು, ಭಾಷೆ ಬದುಕನ್ನು ಬೆಳಗಿದರೆ ಭಾಷೆಯೂ ಬೆಳಗುತ್ತದೆ ಎಂದರು.
ಗಡಿನಾಡಿನಲ್ಲಿ ಭಾಷೆಯ ಸಮಸ್ಯೆಯ ಜೊತೆಗೆ ಬದುಕಿನ ಸಮಸ್ಯೆಯೂ ಇದ್ದು ಈ ಬಹುಮುಖ್ಯ ಸಮಸ್ಯೆ ಅರಿಯಲು ಭಾಷಾ ಚಳುವಳಿಗಳು ಬದುಕಿನ ಚಳುವಳಿಗಳಾಗಬೇಕು. ಗಡಿಭಾಗದ ಕನ್ನಡಿಗರಿಗೆ ಶಿಕ್ಷಣ, ಉದ್ಯೋಗ ಸೇರಿದಂತೆ ಸಕಲ ಸವಲತ್ತುಗಳೂ ದೊರೆಯುವಂತಾಗಬೇಕು.
ಅಲಕ್ಷಿತ ಪ್ರದೇಶದ ಸಾಹಿತಿಗಳಿಗೆ ಚಂಪಾ ಅವರು ಸಂಕ್ರಮಣ ಸಾಹಿತ್ಯ ಪತ್ರಿಕೆ ಮೂಲಕ ವೇದಿಕೆ ಕಲ್ಪಿಸಿದವರು. ಅಶೋಕ ಚಂದರಗಿ ಅವರು ಗಡಿನಾಡಿನ ಗರಡಿ ಮನೆಯ ಕುಸ್ತಿಪಟುವಾಗಿ ಕನ್ನಡವನ್ನು ಬೆಳಗಿದ್ದಾರೆ.
ಅವರಿಗೆ ಚಂಪಾ ಸಿರಿಗನ್ನಡ ಪ್ರಶಸ್ತಿ ನೀಡಿರುವುದು ಅತ್ಯಂತ ಸಮಂಜಸವಾಗಿದೆ ಎಂದರು.
ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ. ಕೆ. ರಾಮೇಗೌಡ, ಕಾರ್ಮಿಕ ಇಲಾಖೆಯ ಉಪ ಆಯುಕ್ತೆ ಶ್ರೀಮತಿ ಮೀನಾ ಪಾಟೀಲ ( ಚಂಪಾ ಅವರ ಪುತ್ರಿ) , ಕನಾ9ಟಕ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಶಂಕರ ಹೂಗಾರ ಉಪಸ್ಥಿತರಿದ್ದರು.

### ಕಲಿಕಾ ಕೇಂದ್ರಗಳು ಪ್ರಾರಂಭ

**ಬೆಂಗಳೂರಿನ ವಸತಿ ಸಮುಚ್ಚಯ ಹಾಗೂ ಸಂಸ್ಥೆಗಳಲ್ಲಿ ಕನಿಷ್ಠ ಇಪ್ಪತ್ತು ಜನರು ಕನ್ನಡ ಬರದಿದ್ದವರು ಇದ್ದರೆ, ಅವರಿಗಾಗಿ ಕನ್ನಡ ಕಲಿಕಾ ಕೇಂದ್ರ ಪ್ರಾರಂಭಿಸಿ ಕನ್ನಡ ಕಲಿಸುವ ಕಾರ್ಯವನ್ನು ಮಾಡಲಿದ್ದು ಈಗಾಗಲೇ ಬೆಂಗಳೂರಿನಲ್ಲಿ ಇಪ್ಪತ್ತು ಕನ್ನಡ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.**

**। ಡಾ. ಪುರುಷೋತ್ತಮ ಬಿಳಿಮಲೆ.**
**ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ.**

## ಪಡಿತರ ಚೀಟಿದಾರರ ಆಧಾರ ದೃಢೀಕರಣ (ಇ–ಕೆವೈಸಿ) ಕ್ಕೆ ಜೂನ್.30 ಅಂತಿಮ ದಿನಾಂಕ

**ಬೆಳಗಾವಿ :** ಬೆಳಗಾವಿ ಜಿಲ್ಲೆಯಲ್ಲಿ ಆಧಾರ ದೃಢೀಕರಣ (ಇ–ಕೆವೈಸಿ) ಆಗದೆ ಬಾಕಿ ಉಳಿದ ಪಡಿತರ ಚೀಟಿದಾರರು ಜೂನ್.30, 2025ರ ಒಳಗಾಗಿ ಆಧಾರ ದೃಢೀಕರಣ (ಇ–ಕೆವೈಸಿ) ಮಾಡಿಸಲು ಕಾಲಾವಕಾಶ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ಬಾಕಿ ಉಳಿದ 47,101 ಪಡಿತರ ಚೀಟಿದಾರರ ಕುಟುಂಬದ ಎಲ್ಲ ಸದಸ್ಯರ ಆಧಾರ ದೃಢೀಕರಣ (ಇ–ಕೆವೈಸಿ) ಬೆರಳಚ್ಚು ದೃಢೀಕರಣ ನೀಡುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಪಡಿತರ ಚೀಟಿಯಲ್ಲಿನ ಸದಸ್ಯರ ಇ–ಕೆವೈಸಿ ಬೆರಳಚ್ಚು ದೃಢೀಕರಣ ಆಗಿದೆಯೇ ಅಥ–ವಾ ಇಲ್ಲವೇ ಎಂಬುದರ ಕುರಿತು ನಿಮ್ಮ ಸಮೀಪದ ನ್ಯಾಯಬೆಲೆ ಅಂಗಡಿಗೆ ಹೋಗಿ ಪರಿಶೀಲಿಸಿಕೊಂಡು, ಇ–ಕೆವೈಸಿ ಆಗದೆ ಇದ್ದಲ್ಲಿ ನಿಮ್ಮ ಸಮೀಪದ ನ್ಯಾಯಬೆಲೆ ಅಂಗಡಿಯಲ್ಲಿಯೇ ತಮ್ಮ ಇ–ಕೆವೈಸಿ (ಆಧಾರ್ ಬೆರಳಚ್ಚು ದೃಢೀಕರಣ)ವನ್ನು ಸಂಪೂರ್ಣ ಉಚಿತವಾಗಿ ಮಾಡಿಕೊಳ್ಳಬಹುದಾಗಿದೆ.
ಸರಕಾರ/ಇಲಾಖೆಯಿಂದ ಇದು ಅಂತಿಮ ಅವಕಾಶವಿರುತ್ತದೆ ಆದಕಾರಣ ಪಡಿತರ ಚೀಟಿದಾರು ಕೊಟ್ಟ ಕಾಲಾವಾಕಾಶದಲ್ಲಿ ಇ–ಕೆವೈಸಿ ಮಾಡಿಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳ ಸೂಚನೆ

## ಡಾ. ಫ.ಗು.ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣ ಜಯಂತಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ: ಸಿದ್ರಾಮೇಶ್ವರ

**ಕೊಪ್ಪಳ :** ಜಿಲ್ಲಾ ಕೇಂದ್ರದಲ್ಲಿ ಜುಲೈ ಮಾಹೆಯಲ್ಲಿ ಡಾ. ಫ.ಗು ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಅವರು ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕೆಂಪೇಗೌಡ, ಡಾ. ಫ.ಗು ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಡಾ.ಫ.ಗುಹಳಕಟ್ಟಿಜಯಂತಿ:ಜಿಲ್ಲಾಮಟ್ಟದಲ್ಲಿ ಡಾ. ಫ.ಗು ಹಳಕಟ್ಟಿ ಜಯಂತಿಯನ್ನು ಜುಲೈ 2 ರಂದು ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 8.30ಕ್ಕೆ ಕುಷ್ಟಗಿ ರಸ್ತೆಯಲ್ಲಿರುವ ಡಾ. ಫ.ಗು ಹಳಕಟ್ಟಿ ವೃತ್ತದಲ್ಲಿ ಪುಷ್ಪಾರ್ಚನೆ ಕಾರ್ಯಕ್ರಮ ಜರುಗಲಿದೆ. ನಂತರ 10.30 ಗಂಟೆಗೆ ನಗರದ ಸಾಹಿತ್ಯ ಭನವದಲ್ಲಿ ನಡೆಯಲಿರುವ ವೇದಿಕೆ ಸಮಾರಂಭದಲ್ಲಿ ಡಾ. ಫ.ಗು ಹಳಕಟ್ಟಿ ಭಾವಚಿತ್ರಕ್ಕೆ ಪೂಜೆ, ವಿಶೇಷ ಉಪನ್ಯಾಸ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದು ಹೇಳಿದರು.

ಹಡಪದ ಅಪ್ಪಣ್ಣ ಜಯಂತಿ: ಸಮಾಜದ ಮುಖಂಡರ ಕೋರಿಕೆಯ ಮೇರೆಗೆ ಕೊಪ್ಪಳ ಜಿಲ್ಲಾ ಮಟ್ಟದ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆಯನ್ನು ಜುಲೈ 10ರ ಬದಲಿಗೆ ಜುಲೈ 22ಕ್ಕೆ ಆಯೋಜಿಸಲಾಗುವುದು. ಅಂದು ಬೆಳಿಗ್ಗೆ 8.30ಕ್ಕೆ ಹಡಪದ ಅಪ್ಪಣ್ಣನವರ ಭಾವಚಿತ್ರದ ಮೇರವಣಿಗೆಯು ನಗರದ ಗಡಿಯಾರ ಕಂಬದ ಹತ್ತಿರವಿರುವ ಅಕ್ಕಮಹಾದೇವಿ ದೇವಸ್ಥಾನದ ಆವರಣದಿಂದ ಆರಂಭಗೊಂಡು ಸಾಹಿತ್ಯ ಭವನದವರೆಗೆ ಜರುಗಲಿದೆ. ಬಳಿಕ 10.30 ಗಂಟೆಗೆ ಸಾಹಿತ್ಯ ಭವನದಲ್ಲಿ ವೇದಿಕೆ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಪೂಜೆ, ಹಡಪದ ಅಪ್ಪಣ್ಣನವರ ಕುರಿತು ವಿಶೇಷ ಉಪನ್ಯಾಸಹಾಗೂಇತರೆಕಾರ್ಯಕ್ರಮಗಳು ನಡೆಯಲಿದೆ ಎಂದರು.

ಡಾ. ಫ.ಗು ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿ ಸಮಾರಂಭಗಳ ದಿನದಂದು, ಸಾಹಿತ್ಯ ಭವನ, ಡಾ. ಫ.ಗು ಹಳಕಟ್ಟಿ ವೃತ್ತ ಮತ್ತು ರಸ್ತೆ ಸ್ವಚ್ಛತೆಗೆ ಕ್ರಮ ಕೈಗೊಳ್ಳಿ. ಮೆರವಣಿಗೆಯಲ್ಲಿ ಹಾಗೂ ವೇದಿಕೆ ಸಮಾರಂಭದಲ್ಲಿ ಪಾಲ್ಗೊಳ್ಳುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು. ಈ ಜಯಂತಿಗಳ ದಿನದಂದು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳು, ಗ್ರಾಮ ಪಂಚಾಯತ್ ಮತ್ತು ಇತರೆ ಕಛೇರಿಗಳಲ್ಲಿ ಆಚರಿಸುವಂತಾಗಬೇಕು. ಜಿಲ್ಲಾ ಮಟ್ಟದ ಜಯಂತಿ ಆಚರಣೆ ಕಾರ್ಯಕ್ರಮಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಂಪೇಗೌಡ ಜಯಂತಿಯನ್ನು ಜೂನ್ 27 ರಂದು ಸರಳವಾಗಿ ಆಚರಿಸುವ ಕುರಿತು ಸಭೆಯಲ್ಲಿ ನಿರ್ಧರಿಸಲಾಯಿತು. ಅಂದು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಅವರಿಗೆ ಗೌರವ ನಮನ ಸಲ್ಲಿಸಬೇಕು ಎಂದು ಹೇಳಿದರು.

ಕಾರ್ಯಕ್ರಮಗಳ ಯಶಸ್ವಿಗೆ ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಸಹಕರಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ, ಬಸವ ಅನುಯಾಯಿಗಳಾದ ಗವಿಸಿದ್ದ ಕೊಪ್ಪಳ, ಈರಣ್ಣ ಕೊರಳಳ್ಳಿ, ಹನುಮಂತ ಕಲಮಂಗಿ, ಶೇಖರ ಇಂಗಳದಾಳ, ಶರಣಬಸವ ಪಾಟೀಲ್, ಗುಡದಪ್ಪ ಹಡಪದ, ವೀರಣ್ಣ ಸಂಕ್ಲಾಪುರ, ಈಶ್ವರಪ್ಪ ದಿನ್ನಿ, ಹಡಪದ ಅಪ್ಪಣ್ಣ ಸಮಾಜದ ಮುಖಂಡರಾದ ಹನುಮಂತಪ್ಪ ಈಶ್ವರಪ್ಪ, ಮಂಜುನಾಥ ಹಡಪದ,ಶವುಕುಮಾರಕಾರಟಗಿ,ಮೌನೇಶ ಕೊಪ್ಪಳ, ದ್ಯಾಮಣ್ಣ ಮದಿನೂರ, ಈಶಪ್ಪ ಮುದ್ದಾಬಳ್ಳಿ, ವೀರುಪಾಕ್ಷಪ್ಪ ಮ್ಯಾದ್ನೇರಿ, ಬಸವರಾಜ್ ಇಟಗಿ, ಶರಣಪ್ಪ ಇಟಗಿ, ಗವಿಸಿದ್ದಪ್ಪ ಮಾದಿನೂರ, ಮುತ್ತಣ್ಣ ಬೆಣ-ಕಲ್, ಬಸವರಾಜ್ ಉಣಿಸಿಹಾಳ್, ಅಂ-ದಪ್ಪ, ವೀರುಪಾಕ್ಷ ದೊಡ್ಡಮನಿ, ಗವಿಸಿದ್ದಪ್ಪ ಕಾಟ್ರಳ್ಳಿ, ಶಂಕ್ರಪ್ಪ ಹಡಪದ, ಈರಣ್ಣ ಸೇ-ರಿದಂತೆ ಮುಂತಾದವರು ಭಾಗವಹಿಸಿದ್ದರು.

# ಕೊಪ್ಪಳ ಜಿಲ್ಲೆಗೆ ನೂತನ ಡಿಸಿ ಸುರೇಶ್ ಇಟ್ನಾಳ ಅಧಿಕಾರ ಸ್ವೀಕಾರ

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ನೂತನ ಜಿಲ್ಲಾಧಿಕಾ-ರಿಗಳಾಗಿ ಸುರೇಶ ಬಿ. ಇಟ್ನಾಳ ಅವರು ಇಂದು ಅಧಿಕಾರ ಸ್ವೀಕರಿಸಿದರು. ನಿರ್ಗಮಿತ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ನೂತನ ಛಿಜಿಲ್ಲಾಧಿಕಾರಿಗಳಿಗೆ ಅಧಿಕಾರಿ ಹಸ್ತಾಂತರಿಸಿದರು. ನೂತನ ಜಿಲ್ಲಾಧಿಕಾ-ರಿಗಳು ಈ ಹಿಂದೆ ದಾವಣಗೆರೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈಗ ಕೊಪ್ಪಳ ಜಿಲ್ಲೆಯ ನೂತನ ಜಿಲ್ಲಾಧಿಕಾರಿಗಳಾಗಿ ಅಧಿಕಾರಿ ಸ್ವೀಕರಿಸಿದರು. ಈ ಹಿಂದೆ ಕೊಪ್ಪಳ ಜಿಲ್ಲೆಯಲ್ಲಿ ಅಪರ ಜಿಲ್ಲಾಧಿಕಾ-ರಿಗಳಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಸುರೇಶ್ ಬಿ ಈ ಇಟ್ನಾಳ್ ಅವರು ಒಬ್ಬ ಉತ್ತಮ ದಕ್ಷ ಆಡಳಿತದ ಅನುಭವ ಹೊಂದಿದ ಅಧಿಕಾರಿ ಯಾಗಿದ್ದು ಈ ಹಿಂದೆ ಅಪರ ಜಿಲ್ಲಾಧಿಕಾರಿ ಯಾಗಿ ಜಿಲ್ಲೆಯಲ್ಲಿ ಒಳ್ಳೆಯ ಕೆಲಸ ಮಾಡಿ ಜಿಲ್ಲೆಯ ಸಾಮಾನ್ಯ ಜನರ ಮತ್ತು ವಿವಿಧ ಸಂಘಟನೆಗಳ ಮೆಚ್ಚುಗೆಗೆ ಪಾತ್ರರಾಗಿದ್ದರು ಅವರೇ ಈಗ ಕೊಪ್ಪಳ ಜಿಲ್ಲೆಗೆ ನೂತನ ಜಿಲ್ಲಾಧಿಕಾರಿಗಳಾಗಿ ಸರ್ಕಾರದಿಂದ ನೇಮಕಗೊಂಡು ಇಂದು ಜಿಲ್ಲೆಗೆ ಭೇಟಿ ನೀಡಿ ಅಧಿಕಾರ ಸ್ವೀಕರಿಸಿ ಕೊಂಡಿರೋದು ಸಂತಸ ಉಂಟು ಮಾಡಿದೆ.



# ಕೊಪ್ಪಳ ಜಿಲ್ಲಾ ಪಂಚಾಯತ ನೂತನ ಸಿಇಓ ಆಗಿ ವರ್ಣಿತ್ ನೇಗಿ ಅಧಿಕಾರ ಸ್ವೀಕಾರ

**ಕೊಪ್ಪಳ :** ಕೊಪ್ಪಳ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ವರ್ಣಿತ್ ನೇಗಿ ಅವರುಬುಧವಾರಅಧಿಕಾರಸ್ವೀಕರಿಸಿದರು.ನಿರ್ಗಮಿತ ಸಿಇಓ ರಾಹಲ್ ರತ್ನಂ ಪಾಂಡೇಯ ಅವರು ನೂತನ ಸಿಇಓ ಅವರಿಗೆ ಅಧಿಕಾರಿ ಹಸ್ತಾಂತರಿದರು. 2019 ರ ಐಎಎಸ್ ಬ್ಯಾಚ್‌ನ ಅಧಿಕಾರಿಯಾದ ವರ್ಣಿತ್ ನೇಗಿ ಅವರು ಮೂಲತಃ ಛತ್ತೀಸಗಡ ರಾಜ್ಯದವರಾಗಿದ್ದಾರೆ. ಅವರು ಮೊದಲು ತಮ್ಮ ಪ್ರೋಬೇಷನರಿ ಅವಧಿಯನ್ನು ಕೊಪ್ಪಳದಲ್ಲಿ ಮುಗಿಸಿದ ನಂತರ ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಸಹಾಯಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿ ನಂತರ ಮೈಸೂರು ಆಡಳಿತ ತರಬೇತಿ ಸಂಸ್ಥೆ(ಎ.ಟಿ.ಐ) ನಲ್ಲಿ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.

ಬೆಂಗಳೂರಿನ ಗ್ರಾಮಾಂತರ ಜಿಲ್ಲೆ ಹಾಗೂ ಕೊಡಗು ಜಿಲ್ಲೆಯ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ ನಂತರ ಕೆ.ಎಚ್.ಡಿ.ಸಿ ಹುಬ್ಬಳ್ಳಿಯ ಎಂ.ಡಿ ಆಗಿ ಕರ್ತವ್ಯ ನಿರ್ವಸಿದ ಅವರು ಸದ್ಯ ಕೊಪ್ಪಳ ಜಿಲ್ಲೆಯ ನೂತನ ಸಿಇಓ ಆಗಿ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಹಾಗೂ ಜಿಲ್ಲಾ ಪಂಚಾಯತನ ವಿವಿಧ ಶಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಕೊಪ್ಪಳ: ನಿವೇದಿತಾ ಪ್ರೌಢಶಾಲೆಯಲ್ಲಿ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮ

**ಕೊಪ್ಪಳ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಜೂನ್ 17 ರಂದು ಕೊಪ್ಪಳ ನಗರ ಪ್ರದೇಶದ ಹಮಾಲರ ಕಾಲೋನಿಯಲ್ಲಿರುವ ನಿವೇದಿತಾ ಪ್ರೌಢಶಾಲೆಯಲ್ಲಿ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಕಾಂತ ಹೆಚ್.ಹೆಚ್. ಅವರು ಮಾತನಾಡಿ, ಜೂನ್ 16 ರಿಂದ 31 ರವರೆಗೆ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಲುಷಿತ ನೀರು/ಆಹಾರ ಸೇವನೆಯಿಂದ, ಕೈತೊಳೆಯದೇ ಊಟ ಮಾಡುವುದರಿಂದ ಅತಿಸಾರ ಭೇದಿ ಉಂಟಾಗುತ್ತದೆ. ಅತಿಸಾರ ಭೇದಿಯಿಂದ ನಿಮ್ಮ ಮಕ್ಕಳನ್ನು ರಕ್ಷಿಸಲು ಸಾಬೂನು ಮತ್ತು ನೀರಿನಿಂದ ಕೈಗಳನ್ನು ಚೆನ್ನಾಗಿ ತೊಳೆಯಬೇಕು. ಕುಡಿಯಲು ಶುದ್ಧವಾದ ಮತ್ತು ಸುರಕ್ಷಿತ ನೀರನ್ನೇ ಬಳಸಬೇಕು. ನಿಮ್ಮ ಮನೆಯ ಪರಿಸರವನ್ನು ಶುಚಿಂ-ಯಾಗಿಟ್ಟುಕೊಳ್ಳಬೇಕು, ಕಡ್ಡಾಯವಾಗಿ ಎಲ್ಲರೂ ಶೌಚಾಲಯ ಬಳಸಬೇಕು. ಮಕ್ಕಳಿಗೂ ಸಹ ಶೌಚಾಲಯ ಬಳಸುವ ರೂಢಿ ಮಾಡಬೇಕು. ನವಜಾತ ಶಿಶುಗಳಿಗೆ 06 ತಿಂಗಳವರೆಗೆ ಕೇವಲ ತಾಯಿಯ ಎದೆ ಹಾಲು ನೀಡಬೇಕು. 06 ತಿಂಗಳ ನಂತರ ಪೂರಕ ಪೌಷ್ಠಿಕ ಆಹಾರ ನೀಡಬೇಕು. ಮಕ್ಕಳಿಗೆಪೋಷಕಾಂಶಗಳನ್ನುಒಳಗೊಂಡ ಪೂರಕಆಹಾರನೀಡಬೇಕೆಂದುತಿಳಿಸಿದರು. ವಿದ್ಯಾರ್ಥಿಗಳು ಈ ವಿಷಯದ ಕುರಿತು ತಮ್ಮ ಮನೆಯಲ್ಲಿ ತಿಳಿಸಿ, ಅತಿಸಾರಭೇದಿ ನಿಯಂತ್ರಣ ಮಾಡುವಲ್ಲಿ ತಮ್ಮ ಸಹಕಾರ ನೀಡಿ ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು.



ಶಾಲಾ ಮುಖ್ಯೋಪಾಧ್ಯಾಯರಾದ ನಿತೀಶ್ ಅವರು ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಾಂಕ್ರಾಮಿಕ ರೋಗಗಳನಿಯಂತ್ರಣಕ್ಕಾಗಿಹಮ್ಮಿಕೊಳ್ಳುವ ಇಂತಹಕಾರ್ಯಕ್ರಮಗಳುವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ ಹಾಗೂ ಸುತ್ತ ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ತಿಳಿಸಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶ್ರೀನಿವಾಸ ಸ್ವಾಗತಿಸಿದರು. ನಮ್ಮ ಕ್ಲಿನಿಕ್‌ನ ವಿಜಯ ಇವರು ವಂದಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ, ಯಶಸ್ವಿಗೊಳಿಸಿದರು.

# ಅಂಚೆ ಇಲಾಖೆಯಿಂದ ಜೂನ್ 26 ರಂದು ಪಿಂಚಣಿ ಅದಾಲತ್

**ಕೊಪ್ಪಳ :** ಕೊಪ್ಪಳ ವಿಭಾಗೀಯ ಅಂಚೆ ಕಚೇರಿ ವತಿಯಿಂದ ಅಂಚೆ ಇಲಾಖೆ ಮೂಲಕ ಪಿಂಚಣಿ ಪಡೆಯುವ ಪಿಂಚಣಿದಾರರ ಅಹವಾಲು, ದೂರು ಸ್ವೀಕಾರಕ್ಕಾಗಿ ಜೂನ್ 26 ರಂದು ವಿಭಾಗೀಯ ಅಂಚೆ ಕಚೇರಿಯಲ್ಲಿಪಿಂಚಣಿಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂಚೆ ಮೂಲಕ ಪಿಂಚಣಿ ಪಡೆಯುವ ಪಿಂಚಣಿದಾರರು, ಅವಲಂಬಿತರು ಪಿಂಚಣಿ ಅದಾಲತ್‌ನಲ್ಲಿ ಭಾಗವಹಿಸಲು ತಮ್ಮ ದೂರು, ಅಹವಾಲುಗಳನ್ನುಅಂಚೆಮೂಲಕಅಂಚೆಅಧೀಕ್ಷಕರ ಕಚೇರಿ, ಕೊಪ್ಪಳ ವಿಭಾಗ, ಕೊಪ್ಪಳ-583231 ವಿಳಾಸಕ್ಕೆ ಅಥವಾ ಇ-ಮೇಲ್ ವಿಳಾಸ: dokoppal.ka@indiapost.gov.in ಗೆ ಜೂನ್ 21 ರೊಳಗೆ ಸಲ್ಲಿಸಬೇಕು ಎಂದು ಕೊಪ್ಪಳ ವಿಭಾಗೀಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಸಾಪ ಕಟ್ಟಡ ನಿರ್ಮಾಣ ನೀಲನಕ್ಷೆ ಸಿದ್ಧತೆ: ಜಿಲ್ಲಾಧಿಕಾರಿ ಟಿ. ಭೂಬಾಲನ್

**ವಿಜಯಪುರ :** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಭವನ ನಿರ್ಮಾಣಕ್ಕೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಿದ್ದೇವೆ. ಈಗಾಗಲೆ ಕಸಾಪ ಕಟ್ಟಡದ ನೀಲನಕ್ಷೆ ಸಿದ್ಧವಾಗಿದೆ ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಅಭಿಪ್ರಾಯ ವ್ಯಕ್ತಪಡಿಸಿದರು.



ಮಂಗಳವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕಸಾಪ ಸಾಹಿತ್ಯ ಪರಿಷತ್ತಿನ ಪದಾಧಿಕಾ-ರಿಗಳೊಂದಿಗೆ ಜಿಲ್ಲಾ ಕಸಾಪ ಕಟ್ಟಡ ನಿರ್ಮಾಣ ಕುರಿತು ನಡೆದ ಸಭೆಯಲ್ಲಿ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯಲಾಗುವುದು. ಪ್ರಸ್ತಾವನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ ಎಂ ಬಿ ಪಾಟೀಲರಿಂದ ಸರ್ಕಾರಕ್ಕೆ ಪ್ರಸ್ತಾವಕ್ಕೆ ಅನುಮತಿ ಕೇಳಲಾಗಿದೆ ಎಂದು ಹೇಳಿದರು.

ಇದೇಸಂದರ್ಭದಲ್ಲಿಜಿಲ್ಲಾಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 2013 ರಲ್ಲಿ ವಿಜಯಪುರ ನಗರದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉಳಿದ 2 ಕೋಟಿ 25 ಲಕ್ಷ ರೂ ಗಳು ಜಮೆ ಇರುತ್ತವೆ. ಈ ಹಣ ಠೇವಣಿ ಇರುವದ-ರಿಂದ ಐದು ಕೋಟಿ ವರೆಗೆ ಆಗಿದೆ. ಇನ್ನುಳಿದ ಹಣ ಜಿಲ್ಲೆಯ ಸಚಿವರಿಂದ, ಶಾಸಕರಿಂದ, ವಿಧಾನ ಪರಿಷತ್ತಿನ ಸದಸ್ಯರಿಂದ, ಲೋಕಸಭಾ ಸದಸ್ಯರಿಂದ ಹಾಗೂ ಸರಕಾರದ ಅನುದಾನ ಪಡೆದು ಕನ್ನಡದ ಹೆಮ್ಮೆಯ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿನ ಭವನವನ್ನು ನಿರ್ಮಾಣ ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕಟ್ಟಡ ನೀಲನಕ್ಷೆ ಸಿದ್ಧಪಡಿಸಿದ ವಿಠ್ಠಲ ಟಂಕಸಾಲಿ, ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ಮಾಲಿಪಾಟೀಲ, ಕಸಾಪ ಗೌರವ ಅಧ್ಯಕ್ಷೆ ಭಾರತಿ ಪಾಟೀಲ, ಕಸಾಪ ಪದಾಧಿಕಾ-ರಿಗಳಾದ ಅಭಿಷೇಕ ಚಕ್ರವರ್ತಿ, ಮಹಮ್ಮದಗೌಸ ಹವಾಲ್ದಾರ, ರವಿ ಕಿತ್ತೂರ, ಬಿ.ಎಂ. ಅಜೂರ, ಕಮಲಾ ಮುರಾಳ, ಜಯಶ್ರೀ ಹಿರೇಮಠ, ಶಿಲ್ಪಾ ಭಸ್ಮೆ, ರಾಜೇಶ್ವರಿ ಮೋಪಗಾರ, ಅಜು9ನ ಶಿರೂರ, ಶಿವಾನಂದ ಮಂಗಾನವರ, ಡಾ. ಶೈಲಾ ಬಳಗಾನೂರ, ಎಂ.ಬಿ. ಮೋಪಗಾರ, ಮಹಮ್ಮದ ವಾಲಿಕಾರ ಮುಂತಾದವರು ಉಪಸ್ಥಿತರಿದ್ದರು.

# ಕೃಷಿ ಇಲಾಖೆ ಅಧಿಕಾರ ಸ್ವೀಕರಿಸಿದ ಶರಣಪ್ಪ ಮುದಗಲ್: ಹೆಚ್. ತಿಮ್ಮನಗೌಡರಿಂದ ಅಭಿನಂದನೆ



**ಬಳ್ಳಾರಿ :** ನಗರದ ಬೆಂಗಳೂರಿನ ಕೃಷಿ ಇಲಾಖೆಯಲ್ಲಿ ಶರಣಪ್ಪ ಮುದಗಲ್ ಅವರು ಸಹಾಯಕ ನಿರ್ದೇಶಕರಾಗಿ ಇತ್ತೀಚೆಗೆ ಅಧಿಕಾರವನ್ನು ಸ್ವೀಕರಿಸಿದ್ದಾರೆ.

ಈ ಸಮಾರಂಭದಲ್ಲಿ ಬಳ್ಳಾರಿ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಜಿಲ್ಲಾಧ್ಯಕ್ಷರಾದ ಹೆಚ್. ತಿಮ್ಮನಗೌಡಅವರುಮತ್ತುಅವರಎಲ್ಲಾಸಹಪಾಠಿಗಳು ಶರಣಪ್ಪ ಮುದುಗಲ್ ಅವರನ್ನು ಗೌರವಿಸುವ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಕುರುಗೋಡು ಉಪಾಧ್ಯಕ್ಷರಾದ ಅರವಿ ಶರಣಬಸವನ ಗೌಡ, ಸಿರುಗುಪ್ಪ ತಾಲೂಕು ಅಧ್ಯಕ್ಷರಾದ ಮಾಧವಯ್ಯ, ಅಮೃತ ಅಗ್ರೋ ಏಜೆನ್ಸಿಸ್ ಸಿದ್ದಪ್ಪ, ಲಕ್ಷ್ಮಿ ಸಾಯಿ ಟ್ರೇಡಿಂಗ್ ಕಂಪನಿ ಸುರೇಶ್, ಮೋಕಾ ವೆಂಕಟೇಶ್ವರ ಅಗ್ರೊ ಏಜೆನ್ಸಿಸ್ ಜಾಲಿಹಾಳ್ ನವೀನ್ ಕುಮಾರ್, ಬಳ್ಳಾರಿ ಮೂರ್ತಿ ರೆಡ್ಡಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ರಾಹುಲ್ ಗಾಂಧಿ ಜನ್ಮ ದಿನದ ಪ್ರಯುಕ್ತ ಯುವ ಕಾಂಗ್ರೆಸ್ ವತಿಯಿಂದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ



**ಹೊಸಪೇಟೆ :** ಯುವ ಕಾಂಗ್ರೆಸ್ ಸಮಿತಿ ಕಾಂಗ್ರೆಸ್ ಪಕ್ಷದ ಅಧಿನಾಯಕರು, ಲೋಕಸಭೆಯ ವಿರೋಧ ಪಕ್ಷದ ನಾಯಕರಾದ "ರಾಹುಲ್ ಗಾಂಧಿ" ಅವರ ಹುಟ್ಟು ಹಬ್ಬದ ಅಂಗವಾಗಿ ಇಂದು ವಿಜಯನಗರ ಜಿಲ್ಲಾ ಹೊಸಪೇಟೆಯ 28ನೇ ವಾರ್ಡಿನ ಕೆಜಿಸ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ" ಶುಕ್ರವಾರ ವಿದ್ಯಾರ್ಥಿಗಳಿಗೆ "ನೋಟ್ ಬುಕ್" ಕೊಡುವುದರ ಮುಖಾಂತರ ಹುಟ್ಟು ಹಬ್ಬವನ್ನು ಆಚರಿಸಲಾಯಿತು.ಈ ಸಂದರ್ಭದಲ್ಲಿ ಯುವಕಾಂಗ್ರೆಸ್ ಜಿಲ್ಲಾಉಪಾಧ್ಯಕ್ಷರಾದಇಮ್ತಿಯಾಜ್ ವಿಜಯನಗರ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅರಬಜ್ ಖಾನ್, ಅಲ್ತಾಫ್ ಶೇಕ್ ಹೊಸಪೇಟೆ ಯುವ ಕಾಂಗ್ರೆಸ್ ವಿಧಾನಸಭಾಧ್ಯಕ್ಷರಾದ ಹಾರುನ್ ಶೇಕ್ ಬ್ಲಾಕ್ ಅಧ್ಯಕ್ಷರಾದ ಪ್ರದೀಪ್ ಕುಮಾರ್ ಕಮಲಾಪುರ ಬ್ಲಾಕ್ ಅಧ್ಯಕ್ಷರು ಗೌಸ್ ಸಾಬ್ ಕಾರ್ಯದರ್ಶಿಗಳು ಹಾಗೂ ಯುವ ಕಾಂಗ್ರೆಸ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.



# ಗ್ರಾಮೀಣ ಹಬ್ಬಗಳು ನಮ್ಮ ಸಂಸ್ಕೃತಿಯ ಜೀವಾಳ: ಸಂಭ್ರಮದ ಹಾಲೋಕಳಿ

**ರಬಕವಿ :** ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ದೇಸಿಯ ಕ್ರೀಡೆ, ಉತ್ಸವಗಳು ನಿರಂತರವಾಗಿ ನಡೆಯುತ್ತಿದ್ದು, ಅವು ನಮ್ಮ ಸಂಸ್ಕೃತಿಯ ಜೀವಾಳವಾಗಿವೆ. ಇವುಗಳ ಮಹತ್ವವನ್ನು ಮುಂದಿನ ಜನಾಂಗಕ್ಕೆ ತಿಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ರಬಕವಿಯ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಾಲಚಂದ್ರ ಉಮದಿ ಅಣ್ಣನವರು ತಿಳಿಸಿದರು.

ಅವರು ಶುಕ್ರವಾರ ರಬಕವಿಯ ಶಂಕರಲಿಂಗ ದೇವಸ್ಥಾನದ ಮುಂಭಾಗದಲ್ಲಿ ನಡೆದ ಹಾಲೋಕಳಿ ಕಾರ್ಯಕ್ರಮದ ಅಂಗವಾಗಿ ಹಾಲಗಂಬಕ್ಕೆ ಪೂಜೆ ನೆರವೇರಿಸಿ ಮಾತನಾಡಿದರು.

ಎರಡು ದಿನಗಳ ಕಾಲ ನೀರೋಕಳಿ ಕಾರ್ಯಕ್ರಮ ನಡೆಯಿತು.

ಹಾಲೋಕಳಿಯನ್ನು ಹಮ್ಮಿಕೊಳ್ಳಲಾಗಿತ್ತು.

ಆಧುನಿಕ ಯುಗದಲ್ಲಿಯೂ ಯುವಕರು ಮತ್ತು ಹಿರಿಯರು ಇಂಥ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಇಂಥ ಹಬ್ಬಗಳು ಪರಸ್ಪರರ ಬಾಂಧವ್ಯವನ್ನು ಹೆಚ್ಚಿಸುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಸವರಾಜ ದಲಾಲ, ಸಂಜಯ ತೆಗ್ಗಿ, ಈಶ್ವರ ನಾಗರಾಳ, ಚಿದಾನಂದ ಸೊಲ್ಲಾಪುರ, ಈರಣ್ಣ ಗುಣಕಿ, ಶಿವು ಹೊಸಮನಿ, ಬಸಲಿಂಗಪ್ಪ ಕುಂಬಾರ, ಬಲದೇವ ಕಟಗಿ, ಮಾರುತಿ ನಾಯಕ, ಸುರೇಶ ಪಾಟೀಲ, ಹನಮಂತ ಪೂಜಾರಿ, ಶ್ರೀಶೈಲ ದಲಾಲ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಲಕ್ಕವ್ವ ದೇವಿ ತಂಡ, ತುಗಲಿ ಲಕ್ಕವ್ವ ದೇವಿ ತಂಡ ಮತ್ತು ಭಗೀರಥ ತಂಡ ಮತ್ತು ಗಟ್ಟಿಗೆ ಬಸವೇಶ್ವರ ತಂಡಗಳು ಹಾಲೋಕಳಿಯಲ್ಲಿ ಭಾಗವಹಿಸಿದ್ದವು. ಹಾಲಗಂಬವನ್ನು ಯಶಸ್ವಿಯಾಗಿ ಏರಿದ ಯುವಕರಿಗೆ ಬೆಳ್ಳಿಯ ಕಡಗವನ್ನು ನೀಡಿ ಸನ್ಮಾನಿಸಲಾಯಿತು.



"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618